'ಜನತಾವಾಣಿ'ಯ ಓದುಗರಿಗೆ,
ಏಜೆಂಟರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ
ದೀಪಾವಳಿ ಹಬ್ಬದ ಶುಭಾಶಯಗಳು.
- ಸಂಪಾದಕರು

**ಬಿಡುವು**

ಬಲಿಪಾಡ್ಯಮಿ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ಬಿಡುವು. ಕಾರಣ ನಾಳೆ ಮಂಗಳವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
- ವ್ಯವಸ್ಥಾಪಕರು

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ನವೆಂಬರ್ 16, 2020

ಸಂಪುಟ : 47 ಸಂಚಿಕೆ : 197 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com






ದಾವಣಗೆರೆಯಲ್ಲಿ ಸೋಮವಾರದ ದೀಪಾವಳಿ ಬಲಿಪಾಡ್ಯಮಿಗೆ ಕಾಚಿಕಡ್ಡಿ, ಹೂ ಖರೀದಿಸುತ್ತಿರುವುದು.

# ದೇವನಗರಿಯಲ್ಲಿ ಹೊಸ ಬೆಳಕು ಚೆಲ್ಲಿದ ದೀಪಾವಳಿ

**ಬಹು ದಿನಗಳ ನಂತರ ಮಾರುಕಟ್ಟೆಯಲ್ಲಿ ಜನ ಜಂಗುಳಿ, ವ್ಯಾಪಾರಿಗಳ ಮೊಗದಲ್ಲಿ ಮಂದಹಾಸ, ಕೊರೊನಾ ಸಂಕಷ್ಟ ಮರೆಸಿದ ಬೆಳಕಿನ ಹಬ್ಬ.**

ದಾವಣಗೆರೆ, ನ.15- ನಗರದಲ್ಲಿ ಭಾನುವಾರ ದೀಪಾವಳಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಕೊರೊನಾ ಹಿನ್ನೆಲೆಯಲ್ಲಿ ಹಿಂದಿನ ಕೆಲ ಹಬ್ಬಗಳು ಕಳೆಗುಂದಿದ್ದವು. ಆದರೆ ದೀಪಾವಳಿ ಜನತೆಯ ಮುಖದಲ್ಲಿ ಹೊಸ ಬೆಳಕು ಮೂಡಿಸಿದಂತಿತ್ತು.

ಕೊರೊನಾ ಸಂಕಷ್ಟಗಳನ್ನು ಬದಿಗಿಟ್ಟು ಜನತೆ ನರಕ ಚತುರ್ದಶಿ ಆಚರಿಸಿದರು. ಸಂಜೆಯಾಗುತ್ತಲೇ ಅಂಗಡಿಗಳ ಮುಂದೆ ತಳಿರು ತೋರಣ, ರಂಗೋಲಿ, ಬಾಳೆ ಕಂದು ಹಾಗೂ ಹೂವುಗಳಿಂದ ಅಲಂಕರಿಸಿದ್ದರು. ಅಲ್ಲದೇ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಿ ಸಂಭ್ರಮಿಸಿದರು. ಮೊಬೈಲ್ ಅಂಗಡಿ, ದಿನಸಿ ಅಂಗಡಿ, ಬಟ್ಟೆ ಅಂಗಡಿ, ಜ್ಯೂವೆಲರ್ಸ್ ಸೇರಿದಂತೆ ಇನ್ನಿತರೆ ಕಡೆ ಲಕ್ಷ್ಮೀ ಪೂಜೆ ನೆರವೇರಿಸಿ, ನಂತರ ಸಿಹಿ ಹಂಚುವ ಮೂಲಕ ದೀಪಾವಳಿ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಅರ್ಥಪೂರ್ಣವಾಗಿ ಹಬ್ಬ ಆಚರಿಸಿದರು. ಅಲ್ಲದೇ ಮಕ್ಕಳು (2ನೇ ಪುಟಕ್ಕೆ)

## ರಾಜ್ಯದಲ್ಲಿ ಕೊರೊನಾ ಸೋಂಕು ತೀವ್ರ ಇಳಿಕೆ

ಬೆಂಗಳೂರು, ನ. 15-ರಾಜ್ಯದಲ್ಲಿ ಕೊರೊನಾ ಸೋಂಕುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು, ಭಾನುವಾರದಂದು 1,529 ಪ್ರಕರಣಗಳು ಪತ್ತೆಯಾಗಿವೆ. 2 ತಿಂಗಳ ಹಿಂದಷ್ಟೇ ರಾಜ್ಯದಲ್ಲಿ ಪ್ರತಿದಿನ 10 ಸಾವಿರಕ್ಕೂ ಹೆಚ್ಚು ಸೋಂಕುಗಳು ಪತ್ತೆಯಾಗುತ್ತಿದ್ದವು.

ರಾಜ್ಯದಲ್ಲಿ 8.61 ಲಕ್ಷ ಜನರಲ್ಲಿ ಕೊರೊನಾ ಸೋಂಕು ಪತ್ತೆಯಾಗಿದ್ದು, ಇವರಲ್ಲಿ ಶೇ.95.50ರಷ್ಟು ಜನರು ಚೇತರಿಸಿಕೊಂಡಿದ್ದಾರೆ. 27,146 ಸಕ್ರಿಯ ಸೋಂಕಿತರಿದ್ದಾರೆ. ಬೆಂಗಳೂರಿನಲ್ಲಿ 840 ಸೋಂಕಿತರು ಕಂಡು ಬಂದಿದ್ದಾರೆ. ಉಳಿದ ಯಾವುದೇ ಜಿಲ್ಲೆಯಲ್ಲಿ ಮೂರಂಕಿಯ ಸೋಂಕಿತರು ಕಂಡು ಬಂದಿಲ್ಲ. ಕೆಲವು ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಹತ್ತಕ್ಕಿಂತ ಕಡಿಮೆ ಇದೆ.

# ಹಿಂದೂಗಳ ಆಚರಣೆಯಲ್ಲಿ ಮಧ್ಯ ಪ್ರವೇಶಕ್ಕೆ ಆಕ್ಷೇಪ



**ಪಟಾಕಿಗಳ ಮೇಲಿನ ನಿಷೇಧಕ್ಕೆ ಸಿ.ಟಿ. ರವಿ ತರಾಟೆ**

ಚೆನ್ನೈ, ನ. 15 – ಪಟಾಕಿಗಳ ಮೇಲೆ ನಿಷೇಧ ಹೇರುವುದರ ತರ್ಕವನ್ನು ಪ್ರಶ್ನಿಸಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಇತರ ಮಾಲಿನ್ಯಕಾರಕಗಳ ಕುರಿತು ಪ್ರಶ್ನೆ ಮುಂದಿಟ್ಟಿದ್ದಾರೆ.

ದೀಪಾವಳಿ ದಿನದಂದು ಎರಡು ಗಂಟೆಯ ಅವಧಿ ಮೀರಿ ಪಟಾಕಿ ಸಿಡಿಸಿದ ಬಗ್ಗೆ ತಮಿಳುನಾಡು ಪೊಲೀಸರು ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ರವಿ ಹಾಗೂ ಕಾಂಗ್ರೆಸ್ ಸಂಸದ ಮಾಣಿಕಮ್ ಟ್ಯಾಗೋರ್ ಸೇರಿದಂತೆ ಹಲವರು ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಪ್ರಸ್ತಾಪಿಸಿ, ಶಿವಕಾಶಿಯ ಪಟಾಕಿ ಉದ್ಯಮದ ಮೇಲೆ ಲಕ್ಷಾಂತರ ಜನ ಅವಲಂಬಿಸಿರುವುದರ ಬಗ್ಗೆ ಗಮನ ಸೆಳೆದಿದ್ದಾರೆ.

ನಿಷೇಧದ ಹಿನ್ನೆಲೆಯಲ್ಲಿ ಕೋಟ್ಯಂತರ ರೂ. ಮೌಲ್ಯದ ಪಟಾಕಿಗಳು ಮಾರಾಟವಾಗದೇ ಉಳಿದಿವೆ. ಸರ್ಕಾರ ಉದ್ಯಮಕ್ಕೆ ಹಣಕಾಸು ನೆರವು ನೀಡಬೇಕೆಂದು ಎಡಪಕ್ಷಗಳು ಒತ್ತಾಯಿಸಿವೆ.

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಪಟಾಕಿಗಳ ಮೇಲೆ ನಿರ್ಬಂಧ ಹಾಗೂ ನಿಷೇಧದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇದು ಪಟಾಕಿ ಉದ್ಯಮಕ್ಕೆ ಭಾರೀ ಪೆಟ್ಟು ನೀಡಿದೆ.

ತಮಿಳುನಾಡಿನ ಶಿವಕಾಶಿಯಲ್ಲಿ ಪಟಾಕಿ ಉತ್ಪಾದನಾ ಉದ್ಯಮಗಳಿವೆ. ಹತ್ತು ಲಕ್ಷ ಜನರು ಇಲ್ಲಿ ಉದ್ಯೋಗ ಪಡೆದಿದ್ದಾರೆ. ಪಟಾಕಿಗಳ (2ನೇ ಪುಟಕ್ಕೆ)

## ಪುಣ್ಯಸ್ಮರಣೆ

**ಲಿಂ॥ ಎಂ.ಜಿ. ಮಹೇಶ್ವರಪ್ಪ**



ನೀವು ನಮ್ಮನ್ನಗಲಿ ದಿನಾಂಕ 17.11.2020ಕ್ಕೆ ನಾಲ್ಕು ವರ್ಷಗಳಾದವು. ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು, ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಸಹೋದರರು : ಎಂ.ಜಿ. ರಾಜಣ್ಣ, ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಎಂ. ಲಲಿತಾ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

ಉಮಾ ಟ್ರೇಡರ್ಸ್, ದಾವಣಗೆರೆ, ಚಿತ್ರದುರ್ಗ.
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.

## ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

**ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್ A/c**


ಓಷನ್ ಪಾರ್ಕ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್ ಆವರಣ,
ಡಿ.ಸಿ. ಕಚೇರಿ ಹತ್ತಿರ, ಜಿ.ಎಂ.ಐ.ಟಿ. ಕಾಲೇಜು ಮುಂಭಾಗ, ಪಿ.ಬಿ. ರಸ್ತೆ, ದಾವಣಗೆರೆ.



ಶ್ರೀಗಂಧಾ'ಸ್ ಆನೆಕೊಂಡ ಹನುಮಂತಪ್ಪ ಕನ್‌ವೆನ್ಷನ್ ಹಾಲ್
ಸುಸಜ್ಜಿತ ಮತ್ತು ಅತ್ಯಾಧುನಿಕವಾಗಿದ್ದು, ಇಲ್ಲಿ ಆರತಕ್ಷತೆ, ನಾಮಕರಣ, ಜನ್ಮದಿನ ಸಮಾರಂಭ, ಸಂಭ್ರಮಾಚರಣೆ, ಸಭೆ - ಸಮಾರಂಭಗಳಿಗೆ ಅನುಕೂಲವಾಗಿರುವ AC ಹಾಲ್ ಬಾಡಿಗೆಗೆ ಸಿಗುತ್ತದೆ. ಪ್ರತ್ಯೇಕ ಅಡುಗೆ ಕೋಣೆ ವ್ಯವಸ್ಥೆ ಇರುತ್ತದೆ.

ಸಂಪರ್ಕಿಸಿ: 94485 89727, 70196 74592

ನಮ್ಮೆಲ್ಲಾ ಗ್ರಾಹಕರಿಗೆ, ಹಿತೈಷಿಗಳಿಗೆ
ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು




Authorised Distributor
**N. S. JAYADEVA PLYWOODS**
# 23/1, 'Sri Kannadathi' Near Laxmi Flour Mill,
Sri Nijalingappa Layout, Davangere - 577 004.
Mobile : 99000 03200, 99007 58878, 70222 22099

## ಬಂಗಾಳಿ ಹಿರಿಯ ನಟ ಸೌಮಿತ್ರ ಚಟರ್ಜಿ ನಿಧನ



ಕೊಲ್ಕೊತಾ, ನ. 15 - ಹೆಸರಾಂತ ಬಂಗಾಳಿ ನಟ ಸೌಮಿತ್ರ ಚಟರ್ಜಿ ಅವರು ಭಾನುವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು.

ಕಳೆದ ಒಂದು ತಿಂಗಳಿನಿಂದ ಹಲವಾರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಅವರು ಪತ್ನಿ ದೀಪಾ ಚಟರ್ಜಿ, ಪುತ್ರಿ ಪೌಲೊಮಿ ಬಸು ಹಾಗೂ ಪುತ್ರ ಸೌಗತ ಚಟರ್ಜಿ ಅವರನ್ನು ಅಗಲಿದ್ದಾರೆ.

ಕೊರೊನಾ ಸೋಂಕಿಗೆ ಗುರಿಯಾಗಿದ್ದ ಅವರನ್ನು ಅಕ್ಟೋಬರ್ 5ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೋಂಕು ಅವರ ನರಮಂಡಲ ವ್ಯವಸ್ಥೆಯನ್ನು ದುರ್ಬಲಗೊಳಿಸಿತ್ತು. ಅವರು ಚಿಕಿತ್ಸೆಗೆ ಸ್ಪಂದಿಸುವುದನ್ನು ನಿಲ್ಲಿಸಿದ್ದಾರೆ ಎಂದು ಬೆಲ್ಲೆ ವ್ಯೂ ಕ್ಲಿನಿಕ್ ವೈದ್ಯರು ನವೆಂಬರ್ 13ರಂದು ತಿಳಿಸಿದ್ದರು. ಆರು ದಶಕಗಳ ಕಾಲ ನಟರಾಗಿದ್ದ ಚಟರ್ಜಿ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾಗಿದ್ದರು. ಅವರು 300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ.

ಆಸ್ಕರ್ ವಿಜೇತ ಚಿತ್ರ ನಿರ್ದೇಶಕ ಸತ್ಯಜಿತ್ ಅವರ ಜೊತೆ ಕಾರ್ಯ ನಿರ್ವಹಿಸಿದ್ದ ಚಟರ್ಜಿ, ಬಂಗಾಳಿ ಚಿತ್ರರಂಗವನ್ನು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗುವಲ್ಲಿ ನೆರವಾಗಿದ್ದರು.

ರಂಗಭೂಮಿ, ಚಿತ್ರಕಥಾ ಲೇಖಕ ಹಾಗೂ ನಿರ್ದೇಶಕರಾಗಿಯೂ ಅವರು ತಮ್ಮ ಛಾಪು ಮೂಡಿಸಿದ್ದರು.

2018ರಲ್ಲಿ ಅವರು ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಗೌರವವಾದ ಲೆಜಿಯನ್ ಡಿಹಾನರ್ ಪ್ರಶಸ್ತಿಯನ್ನೂ ಪಡೆದಿದ್ದರು.

## ಧಾರ್ಮಿಕ ತಳಹದಿಯ ಮೇಲೆ ಆದರ್ಶ ಜೀವನ ಸಾಗಲಿ



### ಮಲೇಬೆನ್ನೂರಿನ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಕಿವಿಮಾತು

ಮಲೇಬೆನ್ನೂರು, ನ.15- ಹೆಮ್ಮಾರಿ ಕೊರೊನಾ ಸೋಂಕಿನ ಬಗ್ಗೆ ಜನರು ಇನ್ನೂ 3 - 4 ತಿಂಗಳು ಜಾಗೃತರಾಗಿರಬೇಕೆಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಶ್ರೀ ಗುರು ರೇಣುಕ ರೈಸ್ ಇಂಡಸ್ಟ್ರೀಸ್‌ನಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಇಂದು ಹಮ್ಮಿಕೊಂಡಿದ್ದ 29ನೇ ವರ್ಷದ ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿದ ಜಗದ್ಗುರುಗಳು, ನಂತರ ಆಶೀರ್ವಚನ ನೀಡಿದರು. ಕೊರೊನಾ ಕಡಿಮೆ ಆಗಿದೆ ಎಂದು ಯಾರೂ ಮೈ ಮರೆಯಬೇಡಿ. ಈ ಮಹಾಮಾರಿ ಸೋಂಕು ಇಡೀ ಜಗತ್ತನ್ನು ಆವರಿಸಿ ಜನಜೀವನ ತತ್ತರಿಸುವಂತೆ ಮಾಡಿದೆ. ಇದರಿಂದ ಸಾಕಷ್ಟು ಸಾವು-ನೋವುಗಳಾಗಿ ಜನ ನೊಂದು ಹೋಗಿದ್ದಾರೆ ಎಂದು ಶ್ರೀಗಳು ಬೇಸರ ವ್ಯಕ್ತಪಡಿಸಿದರು.

ಜನರು ಈ ಸೋಂಕಿನ ಬಗ್ಗೆ ಸದಾ ಜಾಗೃತಿ ವಹಿಸಬೇಕು. ಕೊರೊನಾ ಬಂದವರು ಧೈರ್ಯ ಕಳೆದುಕೊಳ್ಳಬೇಡಿ ಎಂದು ಕಿವಿಮಾತು ಹೇಳಿದ ಶ್ರೀಗಳು, ನಾವೂ ಕೂಡಾ ಕೊರೊನಾ ಸೋಂಕಿಗೆ ಒಳಗಾಗಿ 11 ದಿವಸ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಹಿರಿಯ ಜಗದ್ಗುರುಗಳ ಆಶೀರ್ವಾದದಿಂದ ಗುಣಮುಖರಾಗಿ ಬಂದಿದ್ದೇವೆ ಎಂದು ಹೇಳಿದರು.

ಈ ದೀಪಾವಳಿ ಜನರನ್ನು ನೋವುಗಳಿಂದ, ಅಜ್ಞಾನದ ಅಂಧಕಾರದಿಂದ ದೂರ ಮಾಡಿ ಆಯುರಾರೋಗ್ಯ ಭಾಗ್ಯ ನೀಡಿ, ಸುಖ-ಶಾಂತಿ, ಸಮೃದ್ಧಿ ತರಲೆಂದು ನಾಡಿನ ಜನತೆಗೆ ಶುಭ ಹಾರೈಸಿದ ಶ್ರೀಗಳು, ಜನರು ಆಡಂಬರದ ಜೀವನಕ್ಕೆ ಮಾರುಹೋಗದೆ, ಧಾರ್ಮಿಕ ತಳಹದಿಯ ಮೇಲೆ ಆದರ್ಶ ಜೀವನ ಸಾಗಿಸಬೇಕು ಎಂದು ಹಿತ ನುಡಿದರು.

ಕಾಯಕವೇ ಕೈಲಾಸ ಎಂಬಂತೆ ಪ್ರತಿಯೊಬ್ಬರೂ ತಮ್ಮನ್ನು ತಾವು ದುಡಿಮೆಯಲ್ಲಿ ತೊಡಗಿಸಿಕೊಂಡರೆ ಅಸಾಧ್ಯ ಯಾವುದೂ ಇಲ್ಲ ಎಂಬುದನ್ನು ಉದಾಹರಣೆಯೊಂದಿಗೆ ತಿಳಿಸಿದ ಜಗದ್ಗುರುಗಳು, ರಂಭಾಪುರಿ ಪೀಠದಲ್ಲಿ ನಡೆಯುವ ಅನ್ನ ದಾಸೋಹಕ್ಕೆ ಮಲೇಬೆನ್ನೂರಿನ ಎಲ್ಲಾ ರೈಸ್ ಮಿಲ್ ಮಾಲೀಕರ ಕೊಡುಗೆ ಇದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿ.ಪಂ. ಅಧ್ಯಕ್ಷರಾದ ಶ್ರೀಮತಿ ದೀಪಾ ಜಗದೀಶ್, ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಪುರಸಭೆ ಸದಸ್ಯರಾದ ಬಿ.ಎಂ. ಚನ್ನೇಶ್‌ಸ್ವಾಮಿ, ಬಿ. ಸುರೇಶ್, ಮಾಸಣಿಗಿ ಶೇಖರಪ್ಪ, ಮಹಾಂತೇಶ್‌ಸ್ವಾಮಿ, ಬರ್ಕತ್ ಅಲಿ, ಯುಸೂಫ್, ದಾದಾವಲಿ, ಕೆ.ಜಿ. ಲೋಕೇಶ್, ಪಿಎಸ್‌ಐ ವೀರಬಸಪ್ಪ, ದಾವಣಗೆರೆಯ ಅಕ್ಕಿ ಉದ್ಯಮಿ ಉಳುವಯ್ಯ ಸ್ವಾಮಿ, ರೈಸ್‌ಮಿಲ್ ಮಾಲೀಕರಾದ ತೊಗಲೇರಿ ರಾಜು, ಬಿ.ಎಂ. ಹಾಲಸ್ವಾಮಿ, ಜರೀಕಟ್ಟೆ ಪ್ರವೀಣ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ರೈಸ್ ಮಿಲ್ ಮಾಲೀಕ ಬಿ.ಎಂ. ನಂಜಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಸ್ವಾಗತಿಸಿದರು. ಗುತ್ತಿಗೆದಾರ ಬಿ.ಎಂ. ಜಗದೀಶ್ವರಸ್ವಾಮಿ ವಂದಿಸಿದರು.

## ಸಂಭ್ರಮದ ದೀಪಾವಳಿ

ಉರಿಯುತಿರಲಿ ದೀವಿಗೆ
ಬೆಳಕಾಗಲಿ ಭೂಮಿಗೆ
ಅಜ್ಞಾನದ ತಮವು ಸರಿದು
ಸುಜ್ಞಾನದ ಬೆಳಕು ಹರಿದು
ಆಗಲಿ ಜಗದೇಳಿಗೆ
ಸಂತಸವೀ ಬಾಳಿಗೆ.

ಶ್ರೀ ಕೃಷ್ಣನು ಮಾಡಿದ
ನರಕಾಸುರ ಸಂಹಾರ
ಹದಿನಾರು ಸಾವಿರ
ನಾರಿಯರ ಉದ್ಧಾರ
ಭಕ್ತರಿಂದ ಪಡೆವನವನು
ಪೂಜೆ ಪುನಸ್ಕಾರ.

ಧನತ್ರಯೋದಶಿಯಂದು
ಜಲಕುಂಭವ ಪೂಜಿಸುವರು
ನರಕ ಚತುರ್ದಶಿಯಂದು
ಅಭ್ಯಂಗವ ಮಾಡುವರು.

ಅಮಾವಾಸ್ಯೆ ದಿನವು ಲಕುಮಿ
ಮನೆ ಮನೆಗೆ ಬರುವಳು
ಎಲ್ಲರಿಂದ ಪೂಜೆಗೊಂಡು
ಸಂತಸವ ತರುವಳು.

ದಾನಶೂರನಾದ ಬಲಿಯ
ವಾಮನನು ತುಳಿದ ದಿನ
'ಬಲಿಪಾಡ್ಯಮಿ' ಹೆಸರಿನಲಿ
ಪೂಜಿಸುವರು ಜಗದ ಜನ.

ಸಂಭ್ರಮದ ದೀಪಾವಳಿ
ಪಟಾಕಿಗಳ ಬಲು ಹಾವಳಿ
ಆಗದಿರಲಿ ಯಾವ ಕೆಡುಕು
ಆರದಿರಲಿ ಬಾಳ ಬೆಳಕು.

ಸಾಲು ಸಾಲು ದೀಪದಿಂದ
ಮನೆಯೆಲ್ಲಾ ಬೆಳಗಲಿ
ಮನವು ಬೆಳಗಿ ತಮವು ಕರಗಿ
ಹರುಷ ತುಂಬಿ ತುಳುಕಲಿ.

ಸರ್ವರು ಸುಖವಾಗಿ ಇರಲಿ
ಎಂದು ಶುಭವ ಕೋರುವಾ
ಜಗದ ಜನರ ಒಳಿತು ಬಯಸಿ
ಸಂತೋಷವ ಹಂಚುವಾ.

ದೇಶದ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ
ಶುಭಾಶಯಗಳು.

**- ಜಿ.ಎಸ್.ಗಾಯತ್ರಿ, ಶಿಕ್ಷಕಿ.**
ಬಾಪೂಜಿ ಶಾಲೆ, ಹರಿಹರ.

## ಕಸಾಪದಿಂದ ನಾಳೆ ನುಡಿ ಹಬ್ಬ

ದಾವಣಗೆರೆ, ನ.15 - ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ನಾಳೆ ದಿನಾಂಕ 17ರ ಮಂಗಳವಾರ ಸಂಜೆ 6 ರಿಂದ 7ರವರೆಗೆ 'ಕನ್ನಡ ಕಟ್ಟುವ ಕೆಲಸ ಅಂದು - ಇಂದು' ವಿಷಯ ಕುರಿತು ಸೀತಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀಮತಿ ಅರುಣ ಕುಮಾರಿ ಬಿರಾದಾರ್ ಅವರು ಉಪನ್ಯಾಸ ನೀಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ಕುಂಬಳೂರಿನಲ್ಲಿ ಸಂಪ್ರೋಕ್ಷಣೆ ಪೂಜೆ



ಮಲೇಬೆನ್ನೂರು, ನ.15- ಕುಂಬಳೂರು ಗ್ರಾಮದ ಆರಾಧ್ಯ ದೈವ ಶ್ರೀ ಹನುಮಂತ ದೇವರ ದೇವಸ್ಥಾನದಲ್ಲಿ ಗ್ರಾಮಕ್ಕೆ ಹಿತವನ್ನು ಬಯಸಿ ದೇವರ ಸಂಪ್ರೋಕ್ಷಣೆ ಪೂಜಾ ಕಾರ್ಯಕ್ರಮಗಳು ಗ್ರಾಮಸ್ಥರ ಸಮ್ಮುಖದಲ್ಲಿ ಶನಿವಾರ ಶ್ರದ್ಧಾ-ಭಕ್ತಿಯಿಂದ ಜರುಗಿದವು.

ಬೆಳಗಿನಜಾವ 4 ಗಂಟೆಗೆ ಗಂಗಾ ಪೂಜೆ ನಂತರ ಆಲಯ ಪ್ರವೇಶವು ಮಹಾಗಣಪತಿ ಪ್ರಾರ್ಥನೆ ಹಾಗೂ ಮಹಾಸಂಕಲ್ಪ, ವಾಸುದೇವ ಪುಣ್ಯ ರಕ್ಷಾಬಂಧನ, ನವಗ್ರಹ ಆರಾಧನಾ ಚತುರ್ವಿಂಶತಿ ಕಲಶ ಆರಾಧನೆ ಮತ್ತು ಶ್ರೀರಾಮಚಂದ್ರ, ಗೀತಾ ದೇವಿಯವರ ಕಳಶಾರಾಧನೆ ಮಾಡಲಾಯಿತು.

ನಂತರ ಅಗ್ನಿ ಪ್ರತಿಷ್ಠಾಪನೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ಜಯಾದಿ ಹೋಮ, ಕಲಾವೃದ್ಧಿ ಹೋಮ, ಶ್ರೀರಾಮ ತಾರಕ ಹೋಮ ಹಾಗೂ ಪೂಜಾ ಕಾರ್ಯಕ್ರಮಗಳು ವೈಭವದಿಂದ ಪಾಂಚರಾತ್ರ ಆಗಮೋಕ್ತವಾಗಿ ಬಹಳ ವಿಜೃಂಭಣೆಯಿಂದ ನಡೆದವು.

## ಬಿಹಾರ ಚುನಾವಣೆಯಲ್ಲಿ 160 ಟನ್ ಜೈವಿಕ ತ್ಯಾಜ್ಯ ಸೃಷ್ಟಿ

ನವದೆಹಲಿ, ನ. 15 - ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಳಸಲಾದ ಗ್ಲೌಸ್, ಮಾಸ್ಕ್ ಹಾಗೂ ಸ್ಯಾನಿಟೈಜರ್ ಬಾಟಲಿಗಳಿಂದ ಸುಮಾರು 160 ಟನ್ ಜೈವಿಕ ತ್ಯಾಜ್ಯ ಸೃಷ್ಟಿಯಾಗಿದೆ.

ಕೊರೊನಾ ಸಮಯದಲ್ಲಿ ಚುನಾವಣೆ ನಡೆಸಿದ್ದರಿಂದ ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಆದರೆ, ಈ ಕ್ರಮಗಳಿಂದಾಗಿ ಸಾಕಷ್ಟು ಜೈವಿಕ ತ್ಯಾಜ್ಯ ಸೃಷ್ಟಿಯಾಗಿದೆ.

ಚುನಾವಣೆಯ ಸಮಯದಲ್ಲಿ ಒಟ್ಟು 18 ಲಕ್ಷ ಫೇಸ್ ಶೀಲ್ಡ್, 70 ಲಕ್ಷ ಮಾಸ್ಕ್, ಭದ್ರತಾ ಸಿಬ್ಬಂದಿಗೆ 5.4 ಲಕ್ಷ ಒಂದು ಬಾರಿ ಬಳಸುವ ಗ್ಲೌವ್ಸ್ ಹಾಗೂ ಮತದಾರರಿಗೆ 7.21 ಕೋಟಿ ಒಂದು ಬಾರಿ ಬಳಸುವ ಪಾಲಿಥೀನ್ ಗ್ಲೌಸ್‌ಗಳನ್ನು ಒದಗಿಸಲಾಗಿತ್ತು.

100 ಎಂ.ಎಲ್. ಹಾಗೂ 50 ಎಂ.ಎಲ್.ಗಳ 29 ಲಕ್ಷ ಹ್ಯಾಂಡ್ ಸ್ಯಾನಿಟೈಜರ್‌ಗಳನ್ನೂ ಬಳಸಲಾಗಿತ್ತು. ಜೈವಿಕ ತ್ಯಾಜ್ಯ ಎಲ್ಲೆಂದರಲ್ಲಿ ತಿಪ್ಪೆಯಾಗಬಾರದು ಎಂಬ ಕಾರಣಕ್ಕಾಗಿ ಸಿಬ್ಬಂದಿಗೆ ವಿಲೇವಾರಿಯ ತರಬೇತಿ ನೀಡಲಾಗಿತ್ತು. ಒಟ್ಟಾರೆ 160 ಟನ್‌ಗಳ ಜೈವಿಕ ತ್ಯಾಜ್ಯ ಸೃಷ್ಟಿಯಾಗಿದೆ ಎಂದು ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಹೆಚ್. ಆರ್. ಶ್ರೀನಿವಾಸ್ ತಿಳಿಸಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಜೈವಿಕ ತ್ಯಾಜ್ಯ ವಿಲೇವಾರಿ ಸಂಸ್ಥೆಗಳಿವೆ. ಆದರೆ, ಈ ಸಂಸ್ಥೆಗಳು ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಿಂದ ಜೈವಿಕ ತ್ಯಾಜ್ಯ ಪಡೆಯುತ್ತವೆ. ಇದೇ ಮೊದಲ ಬಾರಿಗೆ ಮತಗಟ್ಟೆಗಳಿಂದ ತ್ಯಾಜ್ಯ ಪಡೆಯಲು ಕಾರ್ಯಕರ್ತರನ್ನು ನಿಯೋಜಿಸಲಾಗಿತ್ತು.

ಪ್ರತಿ ಹತ್ತರಿಂದ 15 ಮತಗಟ್ಟೆಗಳಿಗೆ ಒಂದು ತಂಡವನ್ನು ವಾಹನದೊಂದಿಗೆ ಜೈವಿಕ ತ್ಯಾಜ್ಯ ಸಂಗ್ರಹಣೆಗೆ ನಿಯೋಜಿಸಲಾಗಿತ್ತು.

ಮತದಾನ ಪೂರ್ಣವಾದ ನಂತರ ತಂಡಗಳು ಜೈವಿಕ ತ್ಯಾಜ್ಯವನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರವಾನಿಸಿದ್ದವು. ಅಲ್ಲಿಂದ ತ್ಯಾಜ್ಯವನ್ನು ಜೈವಿಕ ತ್ಯಾಜ್ಯ ವಿಲೇವಾರಿ ತಂಡಗಳು ತೆಗೆದುಕೊಂಡು ಹೋಗಿದ್ದವು.

## ದೇವನಗರಿಯಲ್ಲಿ ಬೆಳಕು ಚೆಲ್ಲಿದ ದೀಪಾವಳಿ

**(1ನೇ ಪುಟದಿಂದ)** ನಾನಾ ಬಗೆಯ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮನೆಗಳ ಮುಂದೆ ದೀಪ ಗಳನ್ನು ಹಚ್ಚಿ ನರಕ ಚತುರ್ದಶಿ ಆಚರಿಸಲಾಗಿತ್ತು. ಇಂದು ಸೋಮ ವಾರ ಬಲಿಪಾಡ್ಯಮಿ ಆಚರಣೆಗೆ ತಯಾರಿ ನಡೆಸಿದ ಜನರು, ಅಗತ್ಯ ವಸ್ತುಗಳನ್ನು ಕೊಂಡೊಕೊಳ್ಳಲು ಮಾರುಕಟ್ಟೆಗೆ ಮುಗಿ ಬಿದ್ದಿದ್ದರು.

ಹಲವು ತಿಂಗಳ ನಂತರ ನಗರದ ಮಾರುಕಟ್ಟೆ ಪ್ರದೇಶ ಜನ ಜಂಗುಳಿಯಿಂದ ತುಂಬಿ ಕೊಂಡಿದ್ದರಿಂದ. ವ್ಯಾಪಾರಸ್ಥರ ಮೊಗದಲ್ಲಿ ಮಂದಹಾಸ ಮೂಡಿತ್ತು. ಮಂಡಿಪೇಟೆ, ಚಾಮರಾಜ ವೃತ್ತ, ಹೈಸ್ಕೂಲ್ ಮೈದಾನ, ಪಿ.ಬಿ. ರಸ್ತೆ, ನಿಟುವಳ್ಳಿ ದುರ್ಗಾಂಬಿಕಾ ದೇವಿ ದೇವಸ್ಥಾನ ಬಳಿ, ಹೊಂಡದ ವೃತ್ತ, ಜಿಲ್ಲಾ ಕ್ರೀಡಾಂಗಣದ ಬಳಿ ಸೇರಿ ದಂತೆ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಕಾಚಿಕಟ್ಟಿ, ಮಾವಿನ ಸೊಪ್ಪು, ಬಾಳೆ ಕಂಬ, ಹೂ ಮತ್ತಿತರ ಹಬ್ಬಕ್ಕೆ ಅಗತ್ಯವಾದ ವಸ್ತುಗಳ ಮಾರಾಟವು ತಡರಾತ್ರಿ ವರೆಗೆ ನಡೆಯುತ್ತಲಿತ್ತು.

**ಅಂದ ಹೆಚ್ಚಿಸಿದ ಆಕಾಶ ಬುಟ್ಟಿ:** ಮನೆಗಳ ಮುಂದೆ ಬಣ್ಣ ಬಣ್ಣದ ಆಕಾಶ ಬುಟ್ಟಿಗಳು ಹಬ್ಬದ ಮೆರುಗು ಹೆಚ್ಚಿಸಿದ್ದವು. ಈ ಹಿಂದೆ ನಕ್ಷತ್ರಾಕಾರದ ಆಕಾಶ ಬುಟ್ಟಿಗಳ ಬಳಕೆ ಮಾತ್ರ ಹೆಚ್ಚಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಬಗೆ ಬಗೆ ರೀತಿಯ ಆಕಾಶ ಬುಟ್ಟಿಗಳು ಮನೆಗಳನ್ನು ಅಲಂಕರಿಸುತ್ತಿವೆ.

ಹಬ್ಬದ ಅಂಗವಾಗಿ ದೇವಾಲಯಗಳಲ್ಲೂ ವಿಶೇಷ ಪೂಜೆ ನಡೆದವು. ಒಟ್ಟಾರೆ ದೀಪಾವಳಿ ಹಿಂದೂ ಸಂಪ್ರದಾಯದ ಆಚರಣೆ, ಉತ್ಸವಗಳಲ್ಲಿ ಅತ್ಯಂತ ಸಂಭ್ರಮದ ಹಬ್ಬ. ದೀಪಗಳ ಹಬ್ಬ. ಮನೆ ಮನೆಗಳಲ್ಲಿ ಸಂಭ್ರಮ ತರುವ ಬೆಳಕಿನ ಹಬ್ಬದಲ್ಲಿ ನಗರ ಸೇರಿದಂತೆ ಜಿಲ್ಲೆಯ ಜನತೆ ಮಿಂದೆದ್ದರು. ಕೆಲವೆಡೆ ಪಟಾಕಿ ಸಿಡಿಸದೆ ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸಿ ಗಮನ ಸೆಳೆದರು. ಸಮೃದ್ಧಿ, ಸಂತೋಷ ಹಾಗೂ ಸಂಪತ್ತಿನ ಸಂಕೇತವಾದ ಬೆಳಕಿನ ಹಬ್ಬವು ಈ ಬಾರಿ ಕೊರೊನಾ ಕಷ್ಟಗಳನ್ನು ಮರೆಸಿ, ಜನತೆಯಲ್ಲಿ ಸಂತೋಷ, ಸಂಭ್ರಮ ತಂದಿದೆ.

## ಅರ್ಬನ್ ಲ್ಯಾಡರ್ ಖರೀದಿಸಿದ ರಿಲೈಯನ್ಸ್

ನವದೆಹಲಿ, ನ. 15 - ರಿಲೈಯನ್ಸ್ ಇಂಡಸ್ಟ್ರೀಸ್‌ನ ಅಧೀನ ಸಂಸ್ಥೆಯಾದ ರಿಲೈಯನ್ಸ್ ರಿಟೇಲ್ ವೆಂಚರ್ಸ್ ಕಂಪನಿಯು ಅರ್ಬನ್ ಲ್ಯಾಡರ್ ಹೋಮ್ ಡಿಕೋರ್ ಸಲ್ಯೂಷನ್ಸ್ ಷೇರುಗಳನ್ನು 182.12 ಕೋಟಿ ರೂ.ಗಳಿಗೆ ಖರೀದಿಸಿದೆ. ಇದು ಅರ್ಬನ್ ಲ್ಯಾಡರ್ ಬಂಡವಾಳದ ಶೇ.96 ರಷ್ಟಾಗಿದೆ. ಉಳಿದ ಪಾಲನ್ನು ಖರೀದಿಸುವ ಮೂಲಕ ಶೇ.100ರಷ್ಟು ಇಕ್ವಿಟಿ ಹೊಂದುವ ಆಯ್ಕೆಯನ್ನು ರಿಲೈಯನ್ಸ್ ರಿಟೇಲ್ ಉಳಿಸಿಕೊಂಡಿದೆ.

ಈ ಕಂಪನಿಯಲ್ಲಿ ಇನ್ನೂ 75 ಕೋಟಿ ರೂ.ಗಳ ಹೂಡಿಕೆ ಮಾಡುವ ಉದ್ದೇಶ ರಿಲೈಯನ್ಸ್ ರಿಟೇಲ್‌ನದ್ದಾಗಿದೆ. 2023ರ ಡಿಸೆಂಬರ್ ವೇಳೆಗೆ ಈ ಹೂಡಿಕೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಮನೆಗಳಿಗೆ ಪೀಠೋಪಕರಣಗಳನ್ನು ಒದಗಿಸುವ ಅರ್ಬನ್ ಲ್ಯಾಡರ್ ಕಂಪನಿಯು ಫೆಬ್ರವರಿ 17, 2012ರಲ್ಲಿ ಕಾರ್ಯಾರಂಭ ಮಾಡಿತ್ತು. ಇದು ದೇಶದ ಹಲವು ನಗರಗಳಲ್ಲಿ ತನ್ನ ರಿಟೇಲ್ ಅಂಗಡಿಗಳನ್ನು ಹೊಂದಿದೆ.

## ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ನ.15- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯನ್ನು ಇದೇ ದಿನಾಂಕ 18 ರಿಂದ 20 ರವರೆಗೆ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶು ವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಸಂಪರ್ಕಿಸಿ ಫೋನ್ 08192-233787.

## ದೀಪವಾಗಲಿ ದೀಪಾವಳಿ

ಬಾಳೆಂಬ ಬಳ್ಳಿಯಲಿ
ಬೆಳಕಿನ ಕಿರಣ ಮೂಡಿ
ಜ್ಞಾನಜ್ಯೋತಿ ಪ್ರಜ್ವಲಿಸಿ
ಬದುಕು ಬಂಗಾರವಾಗಲಿ
ಮತ್ತೆ ಬಂದಿದೆ ದೀಪಾವಳಿ !

ದೀಪದಂತೆ ನಾವು ಕೂಡ
ಬಾಳಿಗೆ ಬೆಳಕು ಆಗೋಣ
ಆತ್ಮಜ್ಯೋತಿಯ ಅರಿಯೋಣ
ಸಾಧನೆಯ ಹಾದಿಯಲ್ಲಿ
ಸಾಗೋಣ
ಮತ್ತೆ ಬಂದಿದೆ ದೀಪಾವಳಿ !

ಮಕ್ಕಳು ನಲಿಯುತ
ಹಿರಿಯರ ವಂದಿಸುತ
ಸಿಹಿ ಊಟ ಸವಿಯುತ
ಪಟಾಕಿ ಹಾರಿಸುತ
ಮತ್ತೆ ಬಂದಿದೆ ದೀಪಾವಳಿ !

ಅಜ್ಜ-ಅಜ್ಜಿ ಅಪ್ಪ-ಅಮ್ಮ
ಮಕ್ಕಳು ಸೇರಿ ನಲಿಯುವ ಹಬ್ಬ
ಉಡುಗೆ ತೊಡುಗೆಯ ಸಿಂಗಾರ
ಬದುಕಲಿ ಇದುವೇ ಬಂಗಾರ
ಮತ್ತೆ ಬಂದಿದೆ ದೀಪಾವಳಿ !

ತಳಿರು ತೋರಣಗಳ ಶೃಂಗಾರ
ಮನೆಮನೆಯಲಿ ಆಕಾಶ ಬುಟ್ಟಿ
ಮುಗಿಲೆತ್ತರ ಪಟಾಕಿ ಸದ್ದು
ಬೆಡಗು ಬಿನ್ನಾಣಗಳ ಚಿತ್ತಾರ
ಮತ್ತೆ ಬಂದಿದೆ ದೀಪಾವಳಿ !

ಸಂತೋಷದ ಸಡಗರ
ಸಂಭ್ರಮಿಸುವ ವೈಯ್ಯಾರ
ಬೆಳಕಿನ ಕಿರಣಗಳ ಮಂದಾರ
ಆಗಲಿ ಅರ್ಥಪೂರ್ಣ
ದೀಪಾವಳಿ
ಮತ್ತೆ ಬಂದಿದೆ ದೀಪಾವಳಿ !

**- ಜೆಂಬಿಗಿ ಮೃತ್ಯುಂಜಯ**
ಉಪನ್ಯಾಸಕರು, ದಾವಣಗೆರೆ.

## ಗ್ರಾಸಿಂನಲ್ಲಿ ಕೃತಕ ಕಾಲು ಜೋಡಣೆ

ರಾಣೇಬೆನ್ನೂರು, ನ.15- ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ಇದೇ ದಿನಾಂಕ 19 ರಂದು ಉಚಿತವಾಗಿ ಕೃತಕ ಕಾಲು ಜೋಡಣೆ ಶಿಬಿರ ನಡೆಯಲಿದೆ ಎಂದು ರೇಣುಕ ನಾಗನೂರ (99643 48288), ಮಂಜುನಾಥ (87224 29612) ತಿಳಿಸಿದ್ದಾರೆ.

## ಹಿಂದೂಗಳ ಆಚರಣೆಯಲ್ಲಿ ಮಧ್ಯ ಪ್ರವೇಶಕ್ಕೆ ಆಕ್ಷೇಪ

**(1ನೇ ಪುಟದಿಂದ)** ಮೇಲೆ ನಿಷೇಧ ಹೇರಲು ಯಾವುದೇ ಕಾರ್ಯಕರ್ತ, ಸರ್ಕಾರ ಇಲ್ಲವೇ ಟ್ರಿಬ್ಯೂನಲ್ ಬಯಸಿದರೆ, ಅದು ದೀಪಾವಳಿಗಷ್ಟೇ ಸೀಮಿತವಾಗದೇ ಎಲ್ಲ ಉದ್ದೇಶಗಳ ಮೇಲೆ ನಿಷೇಧ ಹೇರಬೇಕು. ಕ್ರಿಕೆಟಿಗರೇ ಆಗಲಿ ನಟರೇ ಆಗಲಿ ಮದುವೆ ಸಮಾರಂಭಗಳಲ್ಲಿ ಪಟಾಕಿಗಳನ್ನು ಬಳಸಬಾರದು ಎಂದು ರವಿ ಟ್ವೀಟ್ ಮಾಡಿದ್ದಾರೆ.

ಪಟಾಕಿ ಕಾರ್ಮಿಕರ ಸಂಕಷ್ಟದ ಬಗ್ಗೆ ಟ್ವಿಟ್ಟರ್‌ನಲ್ಲಿ ಹಲವರು ಗಮನ ಸೆಳೆದಿದ್ದು, ಲಕ್ಷಾಂತರ ಜನರಿಗೆ ಪರ್ಯಾಯ ಉದ್ಯೋಗ ಕಲ್ಪಿಸಬೇಕಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ನಿಲುವುಗಳನ್ನು ಬೆಂಬಲಿಸಿರುವ ರವಿ, ಶಿವಕಾಶಿಯು ಪಟಾಕಿ ಉದ್ಯಮವನ್ನು ಅವಲಂಬಿಸಿದೆ. ಪರ್ಯಾಯ ಉದ್ಯೋಗ ಕಲ್ಪಿಸಿದ ನಂತರ ದೇಶಾದ್ಯಂತ ಪಟಾಕಿಗಳ ಮೇಲೆ ನಿಷೇಧ ಹೇರಬಹುದು. ಪ್ರಾಣಿಗಳ ಸಾಮೂಹಿಕ ವಧೆ ಮಾಡುವ ಹಾಗೂ ಮರಗಳನ್ನು ಕಡಿಯುವ ಹಾಗೂ ಪರಿಸರ ಹಾನಿ ಮಾಡುವ ಕ್ರಮಗಳನ್ನೂ ನಿಷೇಧಿಸಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಓರ್ವ ಹಿಂದೂ ಆಗಿ ನಮ್ಮ ಹಬ್ಬಗಳ ಆಚರಣೆಯ ಬಗ್ಗೆ ಯಾರೇ ಮಧ್ಯ ಪ್ರವೇಶಿಸುವುದು ಇಲ್ಲವೇ ಬೋಧಿಸುವುದನ್ನು ನಾನು ಒಪ್ಪುವುದಿಲ್ಲ. ಅತಾರ್ಕಿಕವಾಗಿ ಪಟಾಕಿಗಳ ಮೇಲೆ ನಿಷೇಧ ಹೇರುವ ಮೂಲಕ ಲಕ್ಷಾಂತರ ತಮಿಳಿಗರ ಜೀವನೋಪಾಯಕ್ಕೆ ಹೊಡೆತ ನೀಡಿರುವುದಕ್ಕೆ ವಿರುದ್ಧವಾಗಿದ್ದೇನೆ ಎಂದವರು ತಿಳಿಸಿದ್ದಾರೆ.


ಶಿವಕಾಶಿಯಿಂದ ರವಾನಿಸಲಾದ ಸುಮಾರು 500 ಕೋಟಿ ರೂ. ಮೌಲ್ಯದ ಪಟಾಕಿ ವಿವಿಧೆಡೆ ಡೀಲರ್‌ಗಳ ಬಳಿ ಸಿಲುಕಿದ್ದು ಮಾರಾಟವಾಗಿಲ್ಲ. ಇದರಿಂದಾಗಿ ಪಟಾಕಿಯ ಸಣ್ಣ ಉದ್ಯಮಗಳು ಹಾಗೂ ಲಕ್ಷಾಂತರ ಜನರ ಜೀವನಕ್ಕೆ ಹೊಡೆತ ಬಿದ್ದಿದೆ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಆರ್. ಮುತರಸನ್ ಹೇಳಿದ್ದಾರೆ.

ಸಣ್ಣ ಪಟಾಕಿ ಘಟಕಗಳು ಹಬ್ಬದ ಉದ್ದೇಶದ ಉತ್ಪಾದನೆಗಾಗಿ ಸಾಲಗಳನ್ನು ಪಡೆದಿವೆ. ಇವರಿಗೆ ಪೂರೈಕೆ ಮಾಡಿದ ಪಟಾಕಿಯ ಹಣ ಬಂದಿಲ್ಲ. ಈಗ ನಿಷೇಧದ ನಂತರ ಹಣ ವಾಪಸ್ ಬರುವ ಸಾಧ್ಯತೆಗಳೂ ಇಲ್ಲ ಎಂದವರು ತಿಳಿಸಿದ್ದಾರೆ.

ಪಟಾಕಿಯ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್‌ನ ವಿರುಧನಗರದ ಸಂಸದ ಟ್ಯಾಗೋರ್, ದೆಹಲಿಯಲ್ಲಿ ಪಟಾಕಿಯಿಂದ ಆದ ಮಾಲಿನ್ಯದ ಪ್ರಮಾಣ ಕಡಿಮೆ ಇದೆ. ಬೇರೆ ಮಾಲಿನ್ಯವನ್ನು ಬಿಟ್ಟು ಪಟಾಕಿಗಳ ಮೇಲೆ ದೂಷಿಸಲಾಗುತ್ತಿದೆ ಎಂದಿದ್ದಾರೆ.

ಚೀನಾದ ಪಟಾಕಿ ಉದ್ಯಮದ ಜೊತೆ ಸೆಣಸುವ ಪ್ರತಿಭೆ ಹಾಗೂ ಜ್ಞಾನ ಇರುವುದು ಶಿವಕಾಶಿಗೆ ಮಾತ್ರ. ಆದರೆ, ಮೋದಿ ಸರ್ಕಾರದ ಸಚಿವರು ಶಿವಕಾಶಿಗೆ ಬೆಂಬಲಿಸುತ್ತಿಲ್ಲ ಎಂದವರು ಆಕ್ಷೇಪಿಸಿದ್ದಾರೆ. ಕೊರೊನಾ ನಡುವೆ ಜನರ ಮನಸ್ಸನ್ನು ಮುದಗೊಳಿಸಲು ಜಪಾನಿನ ಪಟಾಕಿಗಳನ್ನು ಸಿಡಿಸಲಾಗುತ್ತಿದೆ. ಆದರೆ, ಭಾರತದಲ್ಲಿ ಸುಳ್ಳುಗಳನ್ನು ಹರಡಿ ಪಟಾಕಿ ನಿಲ್ಲಿಸಲಾಗುತ್ತಿದೆ ಎಂದವರು ಟೀಕಿಸಿದ್ದಾರೆ.


## ಅಮ್ಮುಂದಿ ಶೇಖರಪ್ಪ ನಿಧನ



ಭರಮಸಾಗರ ವಾಸಿ
**ಅಮ್ಮುಂದಿ ಶೇಖರಪ್ಪ**
(90) ಅವರು ದಿನಾಂಕ 15.11.2020 ರಂದು ಭಾನುವಾರ ಸಂಜೆ 4.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಆರು ಜನ ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 16.11.2020ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ಭರಮಸಾಗರದ ವೀರಶೈವ ರುದ್ರಭೂಮಿ ಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು
**ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳು ಹಾಗೂ ಅಮ್ಮುಂದಿ ವಂಶಸ್ಥರು. 97395 13192**


## ಶ್ರೀ ಎನ್.ಎಂ. ಸದಾಶಿವಯ್ಯನವರು (ಹೊಳೆಸಿರಿಗೆರೆ) ನಿಧನ



ದಾವಣಗೆರೆ ಸಿಟಿ ವಾಸಿ,
ಹೊಳೆಸಿರಿಗೆರೆ ವಿಎಸ್‌ಎಸ್‌ಎಸ್‌ಎನ್ ನಿವೃತ್ತ ಕಾರ್ಯದರ್ಶಿಗಳಾಗಿದ್ದ
**ಶ್ರೀ ಎನ್.ಎಂ. ಸದಾಶಿವಯ್ಯನವರು**
ದಿನಾಂಕ 15.11.2020ನೇ ಭಾನುವಾರ ಬೆಳಿಗ್ಗೆ 9.20ಕ್ಕೆ
ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 92 ವರ್ಷ ವಯಸ್ಸಾಗಿತ್ತು.
ಪತ್ನಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಮೊಮ್ಮಕ್ಕಳು
ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.11.2020ರ ಭಾನುವಾರ
ಸಂಜೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಮಹಾಲಿಂಗಮ್ಮ ಮತ್ತು ಮಕ್ಕಳು, ಅಳಿಯಂದಿರು
ಶ್ರೀಮತಿ ಶ್ಯಾಮಲಾ, ಶ್ರೀ ಎನ್.ಎಂ. ಹಾಲಸ್ವಾಮಿ ಮತ್ತು ಮಕ್ಕಳು
ಹೊಳೆಸಿರಿಗೆರೆ ಮತ್ತು ನಂದಿಗಾವಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ. : 94482 33997, 99456 11512

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 15-11-2020ರಂದು ನಿಧನರಾದ ನಮ್ಮ ಸಂಸ್ಥೆಯ ನಿರ್ದೇಶಕರಾಗಿದ್ದ
**ಶ್ರೀ ನಂಜುಂಡಯ್ಯ ಎಸ್. ಅಜ್ಜೇಒಡೆಯರ್ (ಹಿರೇಮಠ)**
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

**ಡಾ॥ ಸುರೇಶ್ ಅಂಬರ್‌ಕರ್,** ಅಧ್ಯಕ್ಷರು, ಅಶ್ವಿನಿ ವಿದ್ಯಾಸಂಸ್ಥೆ
**ಡಾ॥ ಜಿ.ಬಿ.ರವೀಂದ್ರನಾಥ್,** ಉಪಾಧ್ಯಕ್ಷರು, ಅಶ್ವಿನಿ ವಿದ್ಯಾಸಂಸ್ಥೆ
**ಡಾ॥ ಎನ್.ಆರ್. ಶಂಕರ್ ನಾರಾಯಣ್,** ಕಾರ್ಯದರ್ಶಿ, ಅಶ್ವಿನಿ ವಿದ್ಯಾಸಂಸ್ಥೆ
**ಡಾ॥ ಕೆ.ಜಿ.ಚಂದ್ರಪ್ಪ,** ಸಹ ಕಾರ್ಯದರ್ಶಿ, ಅಶ್ವಿನಿ ವಿದ್ಯಾಸಂಸ್ಥೆ
**ಡಾ॥ ಮೃತ್ಯುಂಜಯ ಎನ್.ಹಿರೇಮಠ,** ಪ್ರಾಂಶುಪಾಲರು,
**ಮತ್ತು ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ**

ಅಶ್ವಿನಿ ವಿದ್ಯಾಸಂಸ್ಥೆ
**ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಪಿ.ಜಿ.ಸೆಂಟರ್**
ಬಾತಿ ಕೆರೆ ಎದುರು, ಪಿ.ಬಿ.ರಸ್ತೆ, ದಾವಣಗೆರೆ

## ನಂಜುಂಡಯ್ಯ ಎಸ್. ಅಜ್ಜೇಒಡೆಯರ್ ಮಠ (ಹಿರೇಮಠ) ಲಿಂಗೈಕ್ಯ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 2ನೇ ಕ್ರಾಸ್, ಶಾಮನೂರು ಶಾಪೆ ಪಕ್ಕ, ನಂ.2007/31, 'ಖುಷಿ ಪರ್ಲ್' ಪ್ಯಾಲೇಸ್ ವಾಸಿ, ಸ್ವಾತಂತ್ರ್ಯ ಹೋರಾಟಗಾರರು, ನಿವೃತ್ತ ರೈಲ್ವೆ ಚೀಫ್ ಆಫೀಸರ್, ಅಶ್ವಿನಿ ವಿದ್ಯಾಸಂಸ್ಥೆ ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ನಿರ್ದೇಶಕರೂ ಆಗಿದ್ದ
**ಶ್ರೀ ನಂಜುಂಡಯ್ಯ ಎಸ್. ಅಜ್ಜೇಒಡೆಯರ್ ಮಠ (ಹಿರೇಮಠ)**
(94 ವರ್ಷ) ಅವರು ದಿ: 15-11-2020ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಹೃದಯಾಘಾತದಿಂದ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ನಾಲ್ಕು ಜನ ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ದಿನಾಂಕ 16-11-2020ರ ಸೋಮವಾರ ಬೆಳಿಗ್ಗೆ 7 ರಿಂದ 11ರವರೆಗೆ ಅವರ ನಿವಾಸದಲ್ಲಿ ಇಡಲಾಗುವುದು. ನಂತರ ಅಂತ್ಯಕ್ರಿಯೆಯು ದಾವಣಗೆರೆ ತಾಲ್ಲೂಕು ಕೊಗ್ಗನೂರು ಗ್ರಾಮದ ಹತ್ತಿರ ಇರುವ ಬುಳ್ಳಾಪುರದ ಸ್ವಂತ ಜಮೀನಿನಲ್ಲಿ (NH 4 ಆನಗೋಡು ಹತ್ತಿರ) ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
**ಪತ್ನಿ ಶ್ರೀಮತಿ ವನಜಾಕ್ಷಮ್ಮ ಹಿರೇಮಠ ಮತ್ತು ಕುಟುಂಬದವರು**
✦ ಡಾ॥ ಮೃತ್ಯುಂಜಯ ಎನ್.ಹಿರೇಮಠ ಮತ್ತು ಡಾ॥ ಮುಕ್ತ ಎಂ.ಹೆಚ್.
✦ ಡಾ॥ ಸಿದ್ದಲಿಂಗೇಶ್ ಎನ್. ಹಿರೇಮಠ್ ಮತ್ತು ಶ್ರೀಮತಿ ವಿನುತ, ಗುರುಶ್ರೀ ಆಸ್ಪತ್ರೆ
✦ ಬಸವರಾಜ್ ಎನ್.ಹೆಚ್. ಮತ್ತು ಶ್ರೀಮತಿ ನೀಲಾಂಬಿಕಾ
✦ ವೀರೇಶ್ ಎನ್.ಹೆಚ್. ಮತ್ತು ಡಾ॥ ಶೀಲಾ ವೀರೇಶ್
✦ ಬಸವರಾಜ್ ಎನ್.ಸಿ. ಮತ್ತು ಶ್ರೀಮತಿ ಸುಶೀಲಾ
✦ ಮೃತ್ಯುಂಜಯ ಮತ್ತು ಶ್ರೀಮತಿ ಮಧು
✦ ಬಿ.ಜಿ. ನಾಗರಾಜ್ ಮತ್ತು ಕುಟುಂಬ ವರ್ಗ (ಬಸವಾಪಟ್ಟಣ)
ಮೊ: 08192-222088, 9449823088, 9886496530, 9886269062

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 16, 2020




**ಜಮೀನು ಖರೀದಿಗೆ ಬೇಕು (JVಗೆ)**
ಸೈಟು ಮಾಡುವಂತಹ ಜಮೀನು
Joint Ventureಗೆ ಬೇಕಾಗಿದೆ.
10 ರಿಂದ 70 ಎಕರೆವರೆಗೆ.
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409

**ಮನೆ ಕಟ್ಟಿಸಿಕೊಡುತ್ತೇವೆ**
ನುರಿತ ಇಂಜಿನಿಯರ್ ಗಳಿಂದ ಮೆಟೀರಿಯಲ್ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೀವು ಹೇಳಿದ ರೀತಿಯಲ್ಲಿ ನಿಮ್ಮ ಸೈಟಿನಲ್ಲಿ ಮನೆ ಕಟ್ಟಿಸಿಕೊಡುತ್ತೇವೆ.
ಬೂಸ್ನೂರ್ ಕಿರಣ್ (ಏಜೆಂಟ್)
97315-63409
(ಕಾಂಪ್ಲೆಕ್ಸ್, Appartments ಸಹ ಕಟ್ಟಿಸುತ್ತೇವೆ)

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಮಾಳಗೊಂಡನಹಳ್ಳಿ, ಹರಪನಹಳ್ಳಿ ರೋಡ್‌ನಲ್ಲಿ 3ಎಕರೆ 4 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೋರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**ಮನೆಗಳು ಮಾರಾಟಕ್ಕಿವೆ**
ಸರಸ್ವತಿ ನಗರದಲ್ಲಿ ಡುಪ್ಲೆಕ್ಸ್ 30x60(ಪೂರ್ವ), ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ 40x60 (ಪಶ್ಚಿಮ), ಶಿವ ಪಾರ್ವತಿ ಲೇಔಟ್‌ನಲ್ಲಿ 30x44 ಕಾರ್ನರ್ (ಪೂರ್ವ), ಎಸ್.ಎಸ್. ಲೇಔಟ್‌ನಲ್ಲಿ ಡುಪ್ಲೆಕ್ಸ್ 30x50 (ಉತ್ತರ ಕಾರ್ನರ್), ಶಕ್ತಿ ನಗರದಲ್ಲಿ 20x30 ಅಳತೆಯ ಮನೆಗಳು ಮಾರಾಟಕ್ಕಿವೆ.
98804 40602

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ಮನೆ ಬಾಡಿಗೆಗೆ ಇದೆ**
2BHK, 2ನೇ ಮಹಡಿ (Floor) ಪೂರ್ವ ಬಾಗಿಲು, ವಾಸ್ತು ಪ್ರಕಾರ, ಇರುವ ಮನೆ ವಿದ್ಯಾ ನಂದನ ಸ್ಕೂಲ್ ಹತ್ತಿರ, ಸರಸ್ವತಿ ನಗರದಲ್ಲಿ ಇದೆ.
97405 04217
74117 79793

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂಡ್ ಸೈಟ್‌ಗಳು ಮಾರಾಟಕ್ಕಿವೆ.
RS. 899 Per Sq ft
ದೀಪಾವಳಿ ವಿಶೇಷ ರಿಯಾಯಿತಿಯಲ್ಲಿ
93431 10009
98441 24217
86603 11021

**SITE FOR SALE**
40x60 South,
Anjaneya layout,
11th cross, Site no - 64
B.Narasimha Rao
Contact no:
98451-51179

**ಮಳಿಗೆ (20'x40') ಬಾಡಿಗೆಗೆ ಇದೆ**
ಅಲಹಾಬಾದ್ ಬ್ಯಾಂಕ್ ಬಿಲ್ಡಿಂಗ್ ಹಿಂಭಾಗ, ಉತ್ತರ ದಿಕ್ಕಿನ ಮಳಿಗೆ Unity hospital ಎದುರು ಎ.ವಿ.ಕೆ. ಕಾಲೇಜು ರೋಡ್ ಪಿ.ಜೆ. ಬಡಾವಣೆಯಲ್ಲಿ ಬಾಡಿಗೆಗೆ ಇದೆ.
98443 06262

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**REQUIRED**
Young Males With Fluency In English & Hindi, Female Receptionist
SEND YOUR RESUME WITH RECENT PHOTOGRAPH
drshashi.in@gmail.com
99169 31407

**ಬಾಡಿಗೆಗೆ ಇದೆ**
ನರ್ಸಿಂಗ್ ಹೋಂ ಮಾಡಲು ಯೋಗ್ಯವಾದ ಕಟ್ಟಡ ಬಾಡಿಗೆಗೆ ಇದೆ.
ಸ್ಥಳ: ಆಂಜನೇಯ ಬಡಾವಣೆ
ಮೊ: 77605 62788

**Required**
Male showroom sales executive with accounts experience in Tally for a reputed furniture showroom in Davanagere showroom. Salary will be paid best according to experience. selected Candidates should join immediately. Contact 86607 91774 for interview.

**WANTED**
Hospital/Nursing home
For RENT or LEASE
Contact
99169 31407


# ನಗರದಲ್ಲಿ ಇಂದು ಅಖಿಲ ಭಾರತ ಸಹಕಾರ ಸಪ್ತಾಹ





ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ, ಕರ್ನಾಟಕ ರಾಜ್ಯ ಲ್ಯಾಂಪ್ಸ್ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮೀನುಗಾರರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್, ಜಿಲ್ಲಾ ಸಹಕಾರ ಪಟ್ಟಣ ಬ್ಯಾಂಕುಗಳ ಒಕ್ಕೂಟ, ಜಿಲ್ಲೆಯ ಎಲ್ಲಾ ರೀತಿಯ ಸಹಕಾರ ಸಂಘಗಳು ಮತ್ತು ಎಲ್ಲಾ ರೀತಿಯ ಸೌಹಾರ್ದ ಸಹಕಾರಿಗಳು ಹಾಗೂ ಸಹಕಾರ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ-2020 ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

'ಕೊರೊನಾ ಸೋಂಕು - ಆತ್ಮನಿರ್ಭರ ಭಾರತ - ಸಹಕಾರ ಸಂಸ್ಥೆಗಳು' ಧ್ಯೇಯದೊಂದಿಗೆ ಈ ಬಾರಿಯ ಸಪ್ತಾಹ ನಡೆಯಲಿದೆ. 'ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ-ತರಬೇತಿಯ ಪುನರ್ ಮನನ' ದಿನಾಚರಣೆ ಸಪ್ತಾಹದ ವಿಷಯವಾಗಿದೆ.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಜಿಲ್ಲಾ ಉಸ್ತುವಾರಿ ಬಿ.ಎ. ಬಸವರಾಜ್ ಸಹಕಾರ ಧ್ವಜಾರೋಹಣ ನೆರವೇರಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಎಚ್.ಕೆ. ಪಾಟೀಲ್ ವಾರಪತ್ರಿಕೆ ವಿಶೇಷ ಸಂಚಿಕೆ ಬಿಡುಗಡೆ ಮಾಡುವರು. ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಪಟ್ಟಣ ಬ್ಯಾಂಕುಗಳ ವಿಶೇಷ ಸಂಚಿಕೆ ಬಿಡುಗಡೆ ಮಾಡುವರು.


ಮುಖ್ಯ ಅತಿಥಿಗಳಾಗಿ ಎಂ.ಪಿ. ರೇಣುಕಾಚಾರ್ಯ, ಶ್ರೀಮತಿ ದೀಪಾ ಜಗದೀಶ್, ಜಿ.ಎಂ. ಸಿದ್ದೇಶ್ವರ, ಕೆ. ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎನ್.ಲಿಂಗಣ್ಣ, ಎಸ್. ರಾಮಪ್ಪ, ರಘು ವಿ. ಆಚಾರ್, ಆರ್. ಪ್ರಸನ್ನಕುಮಾರ್, ಲಹರ್‌ಸಿಂಗ್ ಸಿರೋಯಾ, ಮೋಹನ್‌ಕುಮಾರ್ ಕೊಂಡಜ್ಜಿ, ಕೆ.ಪಿ. ನಂಜುಂಡಿ ವಿಶ್ವಕರ್ಮ, ರವಿಕುಮಾರ್ ಎನ್., ಎಸ್. ರುದ್ರೇಗೌಡ, ಡಾ. ತೇಜಸ್ವಿನಿ ಗೌಡ, ಆಯನೂರು ಮಂಜುನಾಥ್, ಎಸ್.ಎಲ್. ಭೋಜಗೌಡ, ಡಾ. ವೈ.ಎ. ನಾರಾಯಣಸ್ವಾಮಿ, ಬಿ.ಜೆ. ಅಜಯ್‌ಕುಮಾರ್, ರಾಜನಹಳ್ಳಿ ಶಿವಕುಮಾರ್, ಡಾ. ಎಸ್. ಮಾದೇಗೌಡ, ಡಾ. ಜೆ.ಆರ್. ಷಣ್ಮುಖಪ್ಪ, ಎನ್.ಎ. ಮುರುಗೇಶ್, ಡಿ. ಆನಂದ್, ಆರ್. ಎಂ. ರವಿ, ಬಿ.ವಿ. ಚಂದ್ರಶೇಖರ್, ತುಷಾರ್ ಗಿರಿನಾಥ್, ಎಸ್. ಜಿಯಾವುಲ್ಲಾ, ಮಹಾಂತೇಶ್ ಬೀಳಗಿ, ಹನುಮಂತರಾಯ, ಶ್ರೀಮತಿ ಪದ್ಮ ಬಸವಂತಪ್ಪ, ಉಪೇಂದ್ರ ಪ್ರತಾಪ್ ಸಿಂಗ್ ಮುಂತಾದ ಗಣ್ಯರು ಆಗಮಿಸುವರು.

## ನಗರಕ್ಕೆ ಇಂದು ಸಹಕಾರ ಸಚಿವ ಸೋಮಶೇಖರ

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ನಗರಕ್ಕೆ ಆಗಮಿಸಲಿದ್ದಾರೆ.

ಸಚಿವರು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು, 9 ಗಂಟೆಗೆ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಬೆಳಿಗ್ಗೆ 11 ಗಂಟೆಗೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿರುವ ಅಖಿಲ ಭಾರತ ಸಹಕಾರ ಸಪ್ತಾಹದ 'ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ ತರಬೇತಿಯ ಪುನರ್‌ಮನನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಧ್ಯಾಹ್ನ 2.30 ಕ್ಕೆ ನಗರದಿಂದ ನಿರ್ಗಮಿಸುವರು.

## ಕೇರಳದ ಖೈದಿಗಳಿಂದ 'ಫ್ರೀಡಂ' ಚಪ್ಪಲಿ ಉತ್ಪಾದನೆ



ತಿರುವನಂತಪುರಂ, ನ. 15 - ಕೇರಳದ ಕೇಂದ್ರ ಬಂಧೀಖಾನೆಯು ಹವಾಯಿ ಚಪ್ಪಲಿಗಳ ಉತ್ಪಾದನೆ ಆರಂಭಿಸಿದ್ದು, ಶೀಘ್ರದಲ್ಲೇ ಜೈಲಿನಲ್ಲಿ ಮಾಡಿದ ಚಪ್ಪಲಿಗಳು ಅಂಗಡಿ ಹಾಗೂ ಮಾರುಕಟ್ಟೆಗಳಲ್ಲಿ ಲಭ್ಯವಾಗಲಿವೆ.

ಪೂಜಪ್ಪುರ ಕೇಂದ್ರ ಬಂಧೀಖಾನೆಯು ಈಗಾಗಲೇ ಹಲವಾರು ತಿನಿಸುಗಳು ಹಾಗೂ ಜೈವಿಕ ಕೃಷಿ, ಬ್ಯೂಟಿ ಪಾರ್ಲರ್‌ಗಳಿಂದ ಹಿಡಿದು ಪೆಟ್ರೋಲ್ ಪಂಪ್‌ಗಳವರೆಗೆ ಹಲವು ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಖೈದಿಗಳ ಕಲ್ಯಾಣದ ಉದ್ದೇಶದೊಂದಿಗೆ ಕೇರಳ ಬಂಧೀಖಾನೆ ಇಲಾಖೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಅದರಲ್ಲಿ ಚಪ್ಪಲಿ ಉತ್ಪಾದನಾ ಘಟಕ ಸ್ಥಾಪನೆಯೂ ಸೇರಿದೆ.

ಚಪ್ಪಲಿಗಳನ್ನು 80 ರೂ.ಗಳಿಗೆ ಮಾರಲಾಗುವುದು. ಇವುಗಳಿಗೆ 'ಫ್ರೀಡಂ ವಾಕ್' ಎಂಬ ಬ್ರಾಂಡ್ ಹೆಸರಿಡಲಾಗಿದೆ ಎಂದು ಬಂಧೀಖಾನೆಯ ಎಸ್‌ಪಿ ನಿರ್ಮಲಾನಂದನ್ ನಾಯರ್ ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಪೂಜಪ್ಪುರ ಕೇಂದ್ರ ಬಂಧೀಖಾನೆಯು ಸಂಪೂರ್ಣ ಕೊರೊನಾ ಮುಕ್ತವಾಗಿರುವುದಾಗಿ ತಿಳಿಸಿದೆ.

ಆರೋಗ್ಯ ಹಾಗೂ ಬಂಧೀಖಾನೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಳೆದ ಒಂದು ತಿಂಗಳಲ್ಲಿ ಬಂಧೀಖಾನೆಯು ಕೊರೊನಾ ಮುಕ್ತವಾಗಿದೆ.

ಜೈಲಿನಲ್ಲಿನ 42 ಖೈದಿಗಳಿಗೆ ಕೊರೊನಾ ಸೋಂಕು ಬಂದಿತ್ತು. ಅವರೀಗ ಸೋಂಕು ಮುಕ್ತರಾಗಿದ್ದಾರೆ, ಜೈಲಿನಲ್ಲಿ ಯಾವುದೇ ಸೋಂಕಿತರಿಲ್ಲ ಎಂದು ನಾಯರ್ ಹೇಳಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಜೈಲು ಒದಗಿಸುತ್ತಿದ್ದ ಹಲವಾರು ಸೇವೆಗಳನ್ನು ನಿಲ್ಲಿಸಲಾಗಿತ್ತು. ಆ ಸೇವೆಗಳನ್ನೀಗ ಪುನರಾರಂಭಿಸಲಾಗಿದೆ. ಆನ್‌ಲೈನ್ ಮಾರುಕಟ್ಟೆಗೂ ಕಾಲಿರಿಸಿದ್ದ ಬಂಧೀಖಾನೆ, ಇತ್ತೀಚೆಗೆ ಖೈದಿಗಳು ತಯಾರಿಸಿದ ಬಿರಿಯಾನಿಯ ಆರ್ಡರ್‌ಗಳನ್ನು ಆನ್‌ಲೈನ್ ಮೂಲಕ ಪಡೆಯಲು ಆರಂಭಿಸಿತ್ತು.

### ಶಾಂತ ಪ್ರಣತೆ

ಕತ್ತಲೋಡಿಸಲು ಚಿಕ್ಕ
ದೀಪ ಸಾಕು.
ಪ್ರಕರ ದೀಪದ ಮುಂದೆ
ಚಿಕ್ಕ ದೀಪ ಶ್ರೇಷ್ಠ.

ಗುಡಿಸಲಿ ಚಿಕ್ಕ ಪ್ರಣತೆ
ಚೊಕ್ಕ ಸುಂದರ.
ಪ್ರಣತೆ ಜೀವನ ದೀಪ
ವಾಗಿರಲಿ.

ಬೆಳಕಿನ ದೀಪ ಮನಸಿನಲಿ
ಹಚ್ಚ ಬೇಕು.
ಮನಸಿನ ಬೆಳಕು ಆಗಲಿ
ಬೆಳಕಾಗಲಿ.

ದೀಪ ಶ್ರೇಷ್ಠ ಪರಮಾಣು
ಪ್ರಮಾಣ ಕೂಡ.
ದೀಪಕ್ಕೆ ದೀಪ ಹಚ್ಚಿ
ಜಗತ್ ಬೆಳಗಿಸಿ.

ದೀಪ ಸ್ನೇಹ ಸಂಕೇತ
ಉಳಿಸುತ್ತ ಸಾಗಲಿ.
ಸ್ನೇಹ ಉಳಿದರೆ ಆತ್ಮ
ಉಳಿದೀತು.

**ರೇವಣ್ಣ ಬಳ್ಳಾರಿ,**
ನ್ಯಾಯವಾದಿ, ದಾವಣಗೆರೆ.

## ರಾಮದಾಸ ಸ್ವಾಮಿ ಅಧ್ಯಾತ್ಮಿಕ ಟ್ರಸ್ಟ್‌ನಿಂದ ಸಾಮೂಹಿಕ ಕಲ್ಯಾಣ ಮಹೋತ್ಸವ



ದಾವಣಗೆರೆ, ನ.15- ಗಾಂಧಿ ನಗರದ ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ 31ನೇ ವರ್ಷದ ಶ್ರೀ ಗುರು ಮಾದಾರ ಚನ್ನಯ್ಯ ಸ್ವಾಮೀಜಿ ಜಯಂತ್ಯುತ್ಸವ, 31ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವ, ಶ್ರೀಗುರು ರಾಮದಾಸ ಸ್ವಾಮಿಗಳ 65ನೇ, ಶ್ರೀ ಮಲ್ಲಯ್ಯ ಸ್ವಾಮಿಗಳ 20ನೇ ಹಾಗೂ ಶ್ರೀ ಕೊಂಡಯ್ಯ ಸ್ವಾಮಿಗಳ 16ನೇ ವರ್ಷದ ಪುಣ್ಯಾರಾಧನೆಯನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಬರುವ ಡಿಸೆಂಬರ್ 28ರಂದು ಗಾಂಧಿ ನಗರದ 1ನೇ ಕ್ರಾಸ್‌ನಲ್ಲಿ ನಡೆಯುವ ಕಾರ್ಯಕ್ರಮವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಲಿದ್ದಾರೆ ಎಂದವರು ಮಾಹಿತಿ ನೀಡಿದರು. ಕೊರೊನಾ ಸೋಂಕಿನ ಕಾರಣದಿಂದ 1 ಜೋಡಿಯ ಕಡೆಯಿಂದ ಇಪ್ಪತ್ತು ಜನರು ಮಾತ್ರ ಆಗಮಿಸಲು ಅವಕಾಶವಿದೆ.

ಸಾಮೂಹಿಕ ವಿವಾಹದಲ್ಲಿ ಮದುವೆಯಾಗುವ ವಧು-ವರರಿಗೆ ತಾಳಿ, ಸೀರೆ, ರವಿಕೆ, ಪಂಚೆ ಉಚಿತವಾಗಿ ನೀಡಲಾಗುವುದು ಎಂದರು. ವಿವರಕ್ಕೆ ಸಂಪರ್ಕಿಸಿ : 9986328748, 9900263111.

ಪಾಲಿಕೆ ಸದಸ್ಯ ಜೆ.ಡಿ. ಪ್ರಕಾಶ್, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಬಿ.ಎಂ. ಈಶ್ವರ್, ಖಜಾಂಚಿ ಬಿ.ಎಂ. ರಾಮಸ್ವಾಮಿ, ಜಿ. ರಾಕೇಶ್, ಬಿ.ಎಂ. ಮಂಜುನಾಥ, ಮಲ್ಲಿಕಾರ್ಜುನ ಪತ್ರಿಕಾಗೋಷ್ಠಿಯಲ್ಲಿದ್ದರು.


## ನಗರಕ್ಕೆ ಇಂದು ಉಸ್ತುವಾರಿ ಸಚಿವ ಭೈರತಿ ಬಸವರಾಜ್

ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಸಚಿವರು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು 9 ಗಂಟೆಗೆ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ನಂತರ ಬೆಳಿಗ್ಗೆ 11 ಕ್ಕೆ ಬಾಪೂಜಿ ಬ್ಯಾಂಕ್ ಸಮುದಾಯ ಭವನ ದಲ್ಲಿ ಏರ್ಪಡಿಸಲಾಗಿರುವ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಧ್ಯಾಹ್ನ 2.30 ಕ್ಕೆ ನಗರದಿಂದ ನಿರ್ಗಮಿಸುವರು.


**ಎಲ್ಲಾ ಪತ್ರಿಕಾ ವಿತರಕರಿಗೆ ಬೆಳಕಿನ ಹಬ್ಬ 'ದೀಪಾವಳಿ'ಯ ಹಾರ್ದಿಕ ಶುಭಾಶಯಗಳು**
✦ ಬಂಕಾಪುರದ ರುದ್ರೇಶ್, 96118 82297
✦ ಟಿ. ಕೆ. ದಿನೇಶ್‌ಬಾಬು, 99453 27255
✦ ಟಿ. ಪಿ. ನಾಗರಾಜ್, 99863 37093
✦ ಎ. ಎನ್. ಕೃಷ್ಣಮೂರ್ತಿ, 98869 12487
✦ ರಮೇಶ್ ವತನ್, 98805 27960
✦ ಬಿ.ಎಸ್. ರಮೇಶ್‌ಬಾಬು, 80959 16055
✦ ಮಂಜುನಾಥ, 98447 42877
✦ ಪಿ. ಪ್ರಕಾಶ್, ವಿದ್ಯಾನಗರ, 98441 24635
ಪತ್ರಿಕಾ ವಿತರಕರ ಬಳಗ, ದಾವಣಗೆರೆ.

**ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ.ಲಿ.,**
# 17, ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-02,
Ph. : 08192-253717, 257192-94, Mob : 9972509780
**ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು**
ಕೋವಿಡ್-19 ಕತ್ತಲಿನಿಂದ
ಹೊಸ ಭರವಸೆಯ ಬೆಳಕು ಚಿಮ್ಮಲಿ
ಮನುಕುಲದ ಆರೋಗ್ಯ ವೃದ್ಧಿಸಲಿ
ಹೊಸ ಬೆಳಕಿನ ನಿರೀಕ್ಷೆಯಲ್ಲಿ
ನಿರಂತರ ಆರೋಗ್ಯ ಸೇವೆ ಸಲ್ಲಿಸಲು ಸಿದ್ಧವಾಗಿರುವ
'ಸಿಟಿ ಸೆಂಟ್ರಲ್ ಆಸ್ಪತ್ರೆ'
ಎಲ್ಲ ಜನತೆಗೆ ಶುಭ ಕೋರುತ್ತದೆ





ಡಾ. ಸುಬ್ಬರಾವ್. ಹೆಚ್.ಎಲ್.,
ಹೃದಯ, ರಕ್ತನಾಳ ಮತ್ತು
ಅನ್ನನಾಳಗಳ ಶಸ್ತ್ರಚಿಕಿತ್ಸಾ ತಜ್ಞರು,
ವೈದ್ಯವೃಂದ ಮತ್ತು ಸಿಬ್ಬಂದಿ ವರ್ಗ.
ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈ.ಲಿ.,
ದಾವಣಗೆರೆ.

**ಹುಟ್ಟುಹಬ್ಬದ ಶುಭಾಶಯಗಳು**




ಶ್ರೀನಿವಾಸ್ ದಾಸಕರಿಯಪ್ಪ
ಅಭಿಮಾನಿಗಳ ಬಳಗ, ದಾವಣಗೆರೆ.
ಹ್ಯಾಪಿ ಫ್ರೆಂಡ್ಸ್ ಗ್ರೂಪ್,
ವಿನೋಬನಗರ, ದಾವಣಗೆರೆ.

**WALL PAPER**
@ offer Price
10 ₹ per Sq.Ft
(600 - 900 per Roll)
Contact :
INTERIOR HIVE
98860-04771
63635-61331

**ಮನೆ ಕೈ ತೋಟ ಹಾಗೂ ಜಮೀನಿಗೆ ಉಪಯೋಗಿಸಲು ಉತ್ತಮವಾದ ಕಾಂಪೋಸ್ಟ್ ಗೊಬ್ಬರ ದೊರೆಯುತ್ತದೆ.**
ಸಂಪರ್ಕಿಸಿ : ದಾವಣಗೆರೆ.
ಮೊ. 93411-71212

**ನೇರ ಪರೀಕ್ಷೆಗಳು**
S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ವಿ ಸಾಗ್ ಬಟ್ಟೆ ಅಂಗಡಿಯಲ್ಲಿ ವೆಲ್ ಟ್ರೈನಡ್ ಹಾಗೂ ಸೂಪರ್ ಕ್ವಾಲಿಫೈಡ್ ಮ್ಯಾನೇಜರ್ ಬೇಕಾಗಿದ್ದಾರೆ.
ಅವರು ಮ್ಯಾನೇಜ್‌ಮೆಂಟ್‌ನಲ್ಲಿ ಪರಿಣಿತರಾಗಿರತಕ್ಕದ್ದು.
ಸಂಪರ್ಕಿಸಿ:
ಪಿ.ಜೆ ಬಡಾವಣೆ, ದಾವಣಗೆರೆ.
72599 99377
96204 11377

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು




**ದೀಪಾವಳಿ ಹಬ್ಬದ ಶುಭಾಶಯಗಳು**
ನಮ್ಮೆಲ್ಲಾ ಆತ್ಮೀಯ ಬಂಧು - ಮಿತ್ರರಿಗೂ, ಸರ್ವ ನಾಗರಿಕರಿಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು.....
ಡಿ. ಕೆ. ಸಂಗಮೇಶ್ ಎಲಿಗಾರ್
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710

## ಎಚ್ಚರದಿಂದ ದೀಪಾವಳಿ ಮಾಡುವ ಬನ್ನಿ

ದೀಪಗಳಿಂದ ಭೂಮಿ ಸಿಂಗರಿಸಿ
ದೀಪಾವಳಿ ಮಾಡುವ ಬನ್ನಿ
ತಾಪತ್ರಯಗಳ ಮರೆತು ಸಂತಸದಿ
ಆಪ್ತರಾಗುವ ಎಲ್ಲರು ಬನ್ನಿ

ದೇಹಗಳು ದೂರದೂರವೇ ಇರಲಿ
ಸ್ನೇಹ, ಪ್ರೀತಿಗಳು ಹೆಚ್ಚಾಗಲಿ
ಸಹಾನುಭೂತಿ ಸಹಬಾಳ್ವೆಯಲಿ
ಮಹಾಕಷ್ಟವನು ಎದುರಿಸಲಿ

ಎಚ್ಚರಿಕೆಯ ಬತ್ತಿ ಉರಿಯುತ್ತಿರಲಿ
ನೀಚ ಬುದ್ಧಿಗಳ ಓಡಿಸಲಿ
ಸ್ವಚ್ಛ ಸುಂದರ ಜೀವನವನ್ನು
ಸ್ವೇಚ್ಛಾಚಾರ ಕೆಡಿಸದಿರಲಿ

ಜೀವದ ಮಹತ್ವ ತಿಳಿಸಿದೆ ರೋಗವು
ಜೀವನ ಸಂಭ್ರಮ ಪಡುತಿರಲಿ
ಜೀವಿಗಳೆಲ್ಲವ ಗೌರವಿಸುವ ಮನ
ನವ ಜ್ಯೋತಿಗಳು ತುಂಬಿಸಲಿ

ಅಂತರಂಗದಲಿ ದೀಪ ಉರಿಯಲಿ
ಚಿಂತೆಯ ಕಂತೆ ಕರಗ್ಹೋಗಲಿ
ಸಂತತ ಆನಂದ ಸಂಭ್ರಮ ಇರಲಿ
ಚೆಂದದ ಸಿರಿಹರಿ ಕೃಪೆ ತೋರಲಿ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಕನ್ನಡ

ಏನೇ ಓದಿರಿ, ಏನೇ ಬರೆಯಿರಿ
ಕನ್ನಡ ಭಾಷೆಗೆ ಮೊದಲ ಆದ್ಯತೆ ನಿಲ್ಲದಿರಲಿ
ಕನ್ನಡವಿಲ್ಲದ ಸ್ವರ್ಗ ಅದು ನರಕವೆನಿಸುತ್ತದೆ.

**ಕೆ.ಎಂ. ಚಂದ್ರಶೇಖರಯ್ಯ**, ನಿವೃತ್ತ ಶಿಕ್ಷಕರು

# ಬಳಕೆ ಶುದ್ಧವಾಗಿದ್ದರೆ ಕನ್ನಡ ಭಾಷೆಗೆ ಅವಸಾನವಿಲ್ಲ


**ಅಂತರ್ಜಾಲ ಕನ್ನಡ ಕಬ್ಬದಲ್ಲಿ ಎಚ್.ಬಿ. ಮಂಜುನಾಥ್**

ದಾವಣಗೆರೆ, ನ.15- ಯಾವುದೇ ಭಾಷೆಯಾಗಲಿ ಬಳಸುತ್ತಿದ್ದರೆ ಉಳಿಯುತ್ತದೆ, ಬಳಸದಿದ್ದರೆ ನಶಿಸುತ್ತದೆ. ಹಾಗೆ ಬಳಸುವಾಗ ಆ ಭಾಷೆಯು ಸಾಧ್ಯವಾದಷ್ಟು ಶುದ್ಧವಾಗಿರಬೇಕು, ಕಲಬೆರಕೆಯಾದರೆ ಕ್ರಮೇಣ ಭಾಷೆ ಅವನತಿ ಕಾಣುತ್ತದೆ ಎಂದು ಹಿರಿಯ ಪತ್ರಕರ್ತ ಎಚ್.ಬಿ ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಗ್ರಂಥ ಸರಸ್ವತಿ ಪ್ರತಿಭಾರಂಗವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನೆರವೇರಿಸುತ್ತಿರುವ ಅಂತರ್ಜಾಲ ಕಾರ್ಯಕ್ರಮದಲ್ಲಿ 'ಕರ್ನಾಟಕ ಏಕೀಕರಣ ಮತ್ತು ಕನ್ನಡ ಭಾಷೆ' ಕುರಿತು ಅವರು ಮಾತನಾಡಿದರು.

ಯಾವುದೇ ಭಾಷೆಯ ಅವನತಿಗೆ ಮತ್ತೊಂದು ಭಾಷೆಯನ್ನು ಹೊಣೆ ಮಾಡುವ ಮೊದಲು ನಾವು ನಮ್ಮ ಭಾಷೆಯನ್ನು ಎಷ್ಟು ಶುದ್ಧವಾಗಿ ಮಾತನಾಡುತ್ತಿದ್ದೇವೆಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ನಾವೀಗ ಮಾತನಾಡುತ್ತಿರುವ ಕನ್ನಡದಲ್ಲಿ ಅನವಶ್ಯಕವಾಗಿ, ಅತಿಯಾಗಿ ಆಂಗ್ಲ ಪದಗಳನ್ನು ನಮಗರಿವಿಲ್ಲದೆ ಬಳಸುತ್ತಿದ್ದೇವೆ. ಇದಕ್ಕೆ ಆಂಗ್ಲ ಭಾಷೆ ಕಾರಣವಲ್ಲ, ನಾವೇ ಕಾರಣ. ನಮ್ಮ ಅಲಕ್ಷ್ಯವೇ ಕಾರಣವೆಂಬುದನ್ನು ನಾವರಿತಾಗ ನಮ್ಮ ಭಾಷಾ ಕಲಬೆರಕೆ ಕಡಿಮೆಯಾಗುತ್ತದೆ. ಅಂದಾಕ್ಷಣ ಮಾತಿನಲ್ಲಿ ನಡುನಡುವೆ ಆಂಗ್ಲ ಅಥವಾ ಅನ್ಯಭಾಷಾ ಪದಗಳನ್ನು ಬಳಸಲೇಬಾರದೆಂದಲ್ಲ. ಅನಿವಾರ್ಯ ವೆನಿಸಿದಾಗ ಅಥವಾ ಸೂಕ್ತ ಪದವಿಲ್ಲದಿದ್ದಾಗ, ಇದ್ದರೂ ಬಳಸುತ್ತಿರುವ ಅನ್ಯಭಾಷಾ ಪದವೇ ಜನಜನಿತ ಮತ್ತು ಸರಳವೆನಿಸಿದಾಗ ಮಾತ್ರ ಬಳಸಬಹುದು.

ಆದರೆ, ಈಗೀಗಂತೂ ನಾವು ಮಾತನಾಡುವ ಕನ್ನಡ ಮಾತಿನಲ್ಲಿ ಅನವಶ್ಯಕವಾದ ಆಂಗ್ಲ ಪದಗಳೇ ಹೆಚ್ಚಾಗಿರುತ್ತವೆ ಎಂದರು.



ಕರ್ನಾಟಕ ರಾಜ್ಯೋತ್ಸವ ಪ್ರೋಗ್ರಾಂ ಗ್ರಾಂಡಾಗಿ ಸೆಲಬ್ರೇಟ್ ಮಾಡಲು ಆರೇಂಜ್‌ಮೆಂಟೆಲ್ಲಾ ಮಾಡಿಕೊಂಡಿದ್ದೇವೆ. ನೀವೇ ಚೀಫ್‌ಗೆಸ್ಟು ಅಂತ ಫಿಕ್ಸ್ ಮಾಡಿಸಿದ್ದೇವೆ. ಪ್ಲೀಸ್ ಡೈರೀಲಿ ನೋಟ್ ಮಾಡ್ಕೋಬೇಕು, ನಿಮ್ದೇ ಮೇನ್ ಸ್ಪೀಚು, ಫ್ಲಾಗ್ ಹಾಸ್ಟಿಂಗು, ಪ್ರೊಸೆಷನ್ನನ್ನು ಮಾರ್ನಿಂಗ್ ಮಾಡಿರ್ತೀವಿ. ನೀವು ಬಂದ ಕೂಡ್ಲೆ ನಿಮ್ದೇ ಲೆಕ್ಚರು... ಹೀಗೇ ಮಾತಾಡ್ತಾ ಹೋಗ್ತಾರೆ!! ಹಾಗಾದ್ರೆ ಇದಕ್ಕೆಲ್ಲಾ ಕನ್ನಡ ಪದಗಳಿಲ್ಲವೇ? ಆಶ್ಚರ್ಯವೆಂದರೆ ಇವರ್‍ಯಾರು ಆಂಗ್ಲ ಮಾಧ್ಯಮ ಶಾಲೆಗಳಿಂದ ಬಂದವರೇನೂ ಅಲ್ಲ. ಭಾಷಾ ಕಲಬೆರಕೆ ಈಗ ಗ್ರಾಮೀಣ ಜನರಲ್ಲೂ ಸಾಮಾನ್ಯವಾಗಿದೆ. ಇದಕ್ಕೆ ನಮ್ಮ ಖಾಸಗಿ ದೃಶ್ಯ ಮಾಧ್ಯಮಗಳು ಬಳಸುವ ಭಾಷೆಯೂ ಕಾರಣವಾಗಿದೆ ಎಂದು ಹೇಳಿದರು.

ತಿನ್ನುವ ಅನ್ನಕ್ಕೆ 'ಅನ್ನ' ಎಂದು ಹೇಳದೆ 'ರೈಸ್' ಎಂದೇ ಹೇಳುತ್ತಿರುವ ನಾವು ಕನ್ನಡ ಭಾಷಾ ಅವನತಿಗೆ ಇನ್ನೊಬ್ಬರನ್ನು ಬೆಟ್ಟುಮಾಡಬಾರದು. ನಾವು ಆಚರಿಸುತ್ತಿರುವುದು ಅನ್ಯ ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಕರ್ನಾಟಕದ ನೆಲ ಒಂದಾಗಿ ವಿಶಾಲ ರಾಜ್ಯವಾದ ಕರ್ನಾಟಕ ರಾಜ್ಯೋತ್ಸವವನ್ನು. ಹಾಗಾಗಿ ಕನ್ನಡ ರಾಜ್ಯೋತ್ಸವ ಅನ್ನುವುದಕ್ಕಿಂತಾ ಕರ್ನಾಟಕ ರಾಜ್ಯೋತ್ಸವ ಅನ್ನುವುದು ಸೂಕ್ತ ಎಂದು ಅವರು ಸಲಹೆ ನೀಡಿದರು.

ಗ್ರಂಥ ಸರಸ್ವತಿಯ ಆರ್. ಶಿವಕುಮಾರ ಸ್ವಾಮಿ ಕುರ್ಕಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀಮತಿ ಐಶ್ವರ್ಯ ವೈಶ್ರವಣ ಸ್ವಾಗತಿಸಿದರು.

## ಪ್ರಶಸ್ತಿ ಹಣ ಕೆಯುಡಬ್ಲ್ಯೂಜೆಗೆ ಅರ್ಪಿಸಿದ ವೆಂಕಟೇಶ್

ಬೆಂಗಳೂರು, ನ.15- ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿರುವ 'ಈ ಸಂಜೆ' ಪತ್ರಿಕೆ ಸಂಪಾದಕ ಟಿ.ವೆಂಕಟೇಶ್ ಅವರು, ತಮಗೆ ದೊರೆತಿರುವ ರಾಜ್ಯೋತ್ಸವ ಪ್ರಶಸ್ತಿಯ ಬಾಬ್ತು ಒಂದು ಲಕ್ಷ ಮೊತ್ತವನ್ನು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದಲ್ಲಿ ದತ್ತಿ ನಿಧಿಗೆ ಅರ್ಪಿಸಿದ್ದಾರೆ.

ಕೆಯುಡಬ್ಲ್ಯೂಜೆ ದತ್ತಿ ನಿಧಿಯಲ್ಲಿ ಒಂದು ಲಕ್ಷ ಹಣವನ್ನು ಠೇವಣಿಯಾಗಿರಿಸಿ, ಪ್ರತಿ ವರ್ಷದ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಈ ಸಂಜೆ ಪತ್ರಿಕೆ ಹೆಸರಿನಲ್ಲಿ ಪ್ರತಿಭಾನ್ವಿತ ಪತ್ರಕರ್ತರೊಬ್ಬರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಕೆಯುಡಬ್ಲ್ಯೂಜೆ ಮೇಲೆ ಅಭಿಮಾನವಿರಿಸಿ, ತಮಗೆ ದೊರೆತ ರಾಜ್ಯೋತ್ಸವ ಪ್ರಶಸ್ತಿಯ ಒಂದು ಲಕ್ಷ ಹಣವನ್ನು ಪ್ರಶಸ್ತಿ ದತ್ತಿ ನಿಧಿಗೆ ಸಮರ್ಪಣೆ ಮಾಡಿರುವ ಟಿ. ವೆಂಕಟೇಶ್ ಅವರನ್ನು ನಾಡಿನ ಪತ್ರಕರ್ತರ ಪರವಾಗಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಭಿನಂದಿಸಿದ್ದಾರೆ.

## ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಮಹಿಳೆ ಮತ್ತು ಸಾಹಿತ್ಯ' ವಿಷಯ ಕುರಿತು ಪ್ರಸೂತಿ ತಜ್ಞರೂ ಆಗಿರುವ ಹಿರಿಯ ಸಾಹಿತಿ ಡಾ. ಹೆಚ್. ಗಿರಿಜಮ್ಮ ಅವರು ಮಾತನಾಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ದೀಪಾವಳಿ

ಬಾಳಿನ ತುಂಬೆಲ್ಲ ಗೋಳು
ಕಷ್ಟ ಪಟ್ಟು ದುಡಿದರೆ ಬಾಳು
ಒಂದು ತುತ್ತು ಕೂಳಿಗೂ ಕಷ್ಟ
ದೇವರಿಗೆ ಗೊತ್ತು ಬಡವರ ಕಷ್ಟ

ಬಡತನದ ಬೇಗೆಯಲಿ
ಕೂಲಿ ನಾಲಿ ಮಾಡುವರು
ಬಂದ ದುಡ್ಡಲ್ಲಿ ಸಂತೆ ಮಾಡಿ
ಸಾಮಾನು ತಂದು ತಿನ್ನುವರು

ಹಬ್ಬ ಹರಿದಿನಗಳು
ಅವರಿಗೆ ಕನಸುಗಳು
ಊರೆಲ್ಲ ಹಬ್ಬ ಮಾಡಿದರೆ
ಇವರು ಕಣ್ಣು ಬಾಯಿ ಬಿಡುವರು

ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯ ಎಂಬ
ವಚನದಂತೆ ಇದ್ದ ಮುರುಕಲು ಮನೆಯ
ಶುದ್ಧ ಮಾಡಿ ಅಕ್ಕಿ ಬೆಲ್ಲ ಹುಗ್ಗಿ ಮಾಡುವರು

ಸಗಣಿ ಸಾರಿಸಿ ಅಂಗಳ ಬಳಿದು
ಚಂದದ ಎಳೆಯ ರಂಗೋಲಿ ಹಾಕಿ
ಅಂಗಳದ ತುಂಬಾ ಟಂಗಟೆ ಹೂ ಚೆಲ್ಲಿ
ಮಣ್ಣಿನ ದೀಪ ಹಚ್ಚಿ ದೀಪಾವಳಿ ಹಬ್ಬ
ಮಾಡುವರು

**- ಹೆಚ್.ಕೆ.ಸತ್ಯಭಾಮ ಮಂಜುನಾಥ**, ದಾವಣಗೆರೆ

## ದಿನದ ಚುಟುಕು

ಸತ್ಯ ಆತ್ಮಬಲ ಹೆಚ್ಚಿಸುತ್ತೆ
ಸುಳ್ಳು ಆತ್ಮಬಲ ಕುಗ್ಗಿಸುತ್ತೆ
ಅನೀತಿ ಬಾಳು ಕೆಡಿಸುತ್ತೆ
ನೀತಿ ಬೆಳಕು ಹರಡುತ್ತೆ. - ವೀಕೆಎಂ













# ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅಧಿಕ ಶುಲ್ಕ : ಖಂಡನೆ



**ಹರಪನಹಳ್ಳಿ**

ಹರಪನಹಳ್ಳಿ,ನ.15- ತಾಲ್ಲೂಕಿನ ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುತ್ತಿರುವ ವಿದ್ಯಾರ್ಥಿ ವೇತನ ಪಡೆಯಲು ಇದೇ ದಿನಾಂಕ 30 ಕೊನೆಯ ದಿನವಾಗಿದ್ದು, ಪೋಷಕರು ಅಗತ್ಯ ದಾಖಲಾತಿಗಳನ್ನು ಸಂಬಂಧಿಸಿದ ಶಿಕ್ಷಕರಿಗೆ ನೀಡಿ ನೋಂದಾಯಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಸಿಆರ್‌ಪಿ ಹೆಚ್.ಸಮೀರ್ ಮನವಿ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್‌ನಿಂದಾಗಿ ಶಾಲೆಗಳು ಆರಂಭವಾಗದಿರುವ ಕಾರಣ ಅಲ್ಪ ಸಂಖ್ಯಾತ ಮಕ್ಕಳ ಶೈಕ್ಷಣಿಕ ಪ್ರೋತ್ಸಾಹಕ್ಕೆ ಸರ್ಕಾರ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ಪಡೆಯಲು ಆನ್‌ಲೈನ್‌ನಲ್ಲಿ ನೋಂದಾಯಿಸಬೇಕೆಂದು ಕರೆ ನೀಡಿದರು.

ಜೈನ್, ಬೌದ್ಧ, ಕ್ರೈಸ್ತರು ಹಾಗೂ ಮುಸ್ಲಿಂ ಸಮಾಜದ ಮೆಟ್ರಿಕ್ ಪೂರ್ವ ಹಾಗೂ ನಂತರದ ವಿದ್ಯಾರ್ಥಿಗಳು ವೇತನ ಪಡೆಯಲು ಅರ್ಹರಾಗಿರುತ್ತಾರೆ. ತಾಲ್ಲೂಕಿನ ಶಿಕ್ಷಣ ಇಲಾಖೆಯ ಅಲ್ಪ ಸಂಖ್ಯಾತರ ಘಟಕ ಇನ್ನೂ ದಾವಣಗೆರೆ ಜಿಲ್ಲೆಯಲ್ಲಿದೆ. ಆದ್ದರಿಂದ ಪೋಷಕರು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ದಾವಣಗೆರೆ ಜಿಲ್ಲೆ ಎಂದು ನಮೂದಿಸ ಬೇಕಾಗಿದೆ. ಜಿಲ್ಲೆಯಲ್ಲಿ 38600 ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿದ್ದಾರೆ. ಆದರೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿರುವುದು ಕೇವಲ 9600 ಮಕ್ಕಳು ಮಾತ್ರ. ಆದ್ದರಿಂದ ಕೂಡಲೇ ಅರ್ಜಿ ಸಲ್ಲಿಸುವಂತೆ ಆಯಾ ಶಾಲೆಗಳಲ್ಲಿ ಮತ್ತು ಚರ್ಚ್, ಮಸೀದಿ ಹಾಗೂ ಜೈನರಲ್ಲೂ ಮನವಿ ಮಾಡಿಕೊಳ್ಳಲಾಗಿದೆ ಎಂದರು.

ತಾಲ್ಲೂಕು ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಎ.ಮೂಸಾ ಸಾಬ್ ಮಾತನಾಡಿ, ಸರ್ಕಾರಿ ಪದವಿ ಕಾಲೇಜುಗಳಲ್ಲಿ 2ಎ, 3ಎ ಹಾಗೂ 3ಬಿ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿ ಮಾಡಿರುವ ಶುಲ್ಕವನ್ನು ಕಡೆಗಣಿಸಿ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ನಿಗದಿ ಮಾಡಿರುವ ಶುಲ್ಕವನ್ನು ಪಡೆಯುತ್ತಿರುವುದು ಸರಿಯಲ್ಲ. ಕೂಡಲೇ ಶುಲ್ಕವನ್ನು ರಿಯಾಯಿತಿ ಗೊಳಿಸಿ ಪ್ರವೇಶ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಅಲ್ಪ ಸಂಖ್ಯಾತ ನಿಗಮದಿಂದ 105 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಪ್ರತಿ ತಾಲ್ಲೂಕಿಗೆ 90 ರಿಂದ 100 ಫಲಾನಭವಿಗಳನ್ನು ಆಯ್ಕೆ ಮಾಡಿ ಶ್ರಮ ಶಕ್ತಿ ಹಾಗೂ ಮಹಿಳಾ ಮೈಕ್ರೋ ಸಾಲ ಯೋಜನೆಯಲ್ಲಿ ಹಣ ನೀಡಲಾಗುವುದು. ಬೀದಿಬದಿ ವ್ಯಾಪಾರ, ಹೈನುಗಾರಿಕೆ ಇನ್ನೂ ಮುಂತಾದ ವ್ಯಾಪಾರಕ್ಕೆ ಹಣ ನೀಡಲು ನಿಗಮ ಮಾರ್ಗ ಸೂಚಿ ನೀಡಿದೆ. ಡಿಸೆಂಬರ್ 10 ರೊಳಗೆ ಅರ್ಹರು ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ಪಟ್ಟಣದ ಅಲ್ಪ ಸಂಖ್ಯಾತರ ಕಛೇರಿಯಿಂದ ಪಡೆಯಬಹುದು.

ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿ ರುಕ್ಸಾನ ಬೇಗಂ, ಮುಖಂಡರಾದ ದಾದಾಪೀರ್, ಖಲಂದರ್, ಮನ್ಸೂರ್, ಸೈಯದ್ ಮೌಲಾನಾ, ರಿಯಾಜ್, ದಾವೂದ್ ಸೇರಿದಂತೆ ಇತರರಿದ್ದರು.

# ಶಾಸನಗಳು ಕಾವ್ಯ ರಚನೆಗೆ ಪ್ರೇರಣೆ



ಡಾ. ವಿ. ಜಯರಾಮಯ್ಯ

ದಾವಣಗೆರೆ, ನ.15- ಕನ್ನಡದ ಅನೇಕ ಶಾಸನಗಳು ಕವಿಗಳ ಕಾವ್ಯ ರಚನೆಗೆ ಪ್ರೇರಣೆ ನೀಡಿವೆ ಎಂಬುದಾಗಿ ದಾವಣಗೆರೆ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಡಾ. ವಿ. ಜಯರಾಮಯ್ಯ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಅಂತರ್ಜಾಲ ಕನ್ನಡ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯಕ್ಕೆ ಪ್ರೇರಣೆಯಾದ ಶಾಸನಗಳು ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಕನ್ನಡ ಶಾಸನಗಳನ್ನು ಸಂಶೋಧಕ ಡಾ. ಚಿದಾನಂದಮೂರ್ತಿ ಕನ್ನಡ ಸಾಹಿತ್ಯದ ತಲಕಾವೇರಿ ಎಂದು ಕರೆಯುತ್ತಾರೆ. ಕನ್ನಡ ಸಾಹಿತ್ಯ ಉಗಮವಾದದ್ದು ಶಾಸನಗಳಿಂದ ಎಂಬುದು ಅವರ ವಾದವಾಗಿದೆ. ಶಾಸನಗಳಲ್ಲಿ ಇರುವ ಪದ್ಯಗಳು ಮುಂದೆ ಕನ್ನಡ ಕವಿಗಳಿಗೆ ಪ್ರೇರಕ ಶಕ್ತಿಯಾದವು ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ ಎನ್ನುವ ಮೂಲಕ ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿರುವ ಪದ್ಯಗಳನ್ನು ವಾಚಿಸಿ, ಸಾರಾಂಶ ಹೇಳುವ ಮೂಲಕ ತಮ್ಮ ಉಪನ್ಯಾಸಕ್ಕೆ ಮೆರುಗು ನೀಡಿದರು.

ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ದಾವಣಗೆರೆ ಜಿಲ್ಲೆಯವರೇ ಆದ ಡಾ. ಚಿದಾನಂದಮೂರ್ತಿ, ಪ್ರೊ. ರಾಜಶೇಖರಪ್ಪ, ನಾಡಿಗ್, ಬುರುಡೇಕಟ್ಟೆ ಮಂಜಪ್ಪ ಅನೇಕರು ನಡೆಸಿರುವ ಸಂಶೋಧನೆಗಳು ಕನ್ನಡ ಸಾಹಿತ್ಯಕ್ಕೆ ಬೆಳಕು ಚೆಲ್ಲುವಲ್ಲಿ ಪೂರಕವಾಗಿವೆ. ಕನ್ನಡ ಶಾಸನಗಳು ಕನ್ನಡ ಸಾಹಿತ್ಯಕ್ಕೆ ಅನೇಕ ಕೊಡುಗೆಗಳನ್ನು ನೀಡಿವೆ ಎಂದು ಅಭಿಪ್ರಾಯ ಪಟ್ಟರು.

ಸೀತಮ್ಮ ಸರ್ಕಾರಿ ಪ.ಪೂ. ಕಾಲೇಜು ಗ್ರಂಥಪಾಲಕರಾದ ಅನ್ನಪೂರ್ಣ ಪಾಟೀಲ್ ಸ್ವಾಗತಿಸಿದರು. ಜಾನಪದ ಕಲಾ ತಂಡದ ಸಂಗೀತಗಾರ್ತಿ ರುದ್ರಾಕ್ಷಿ ಬಾಯಿ ಪುಟ್ಟಾನಾಯಕ್ ಮತ್ತು ಸಂಗಡಿಗರು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

# ಜಗಳೂರಿನಲ್ಲಿ ಐಸಿಎಆರ್ ತರಳಬಾಳು ಕೃಷಿ ಕೇಂದ್ರದಿಂದ ಹತ್ತಿ ಬೆಳೆ ಪ್ರಾತ್ಯಕ್ಷಿಕೆ




ಜಗಳೂರು, ನ.15- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಜಗಳೂರು ತಾಲ್ಲೂಕು ಮರಿಕುಂಟೆ ಗ್ರಾಮದಲ್ಲಿ ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯ ಕ್ಷೇತ್ರೋತ್ಸವ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಕೇಂದ್ರದ ಮಣ್ಣು ವಿಜ್ಞಾನ ವಿಷಯ ತಜ್ಞ ಹೆಚ್.ಎಂ.ಸಣ್ಣ ಗೌಡರು ಮಾತನಾಡಿ, ರೈತರು ಸಮಗ್ರ ಬೆಳೆ ನಿರ್ವಹಣೆ ಕಡೆ ಗಮನ ವಹಿಸಬೇಕೆಂದು ಮನವರಿಕೆ ಮಾಡಿಕೊಟ್ಟರು.

ಪ್ರಾತ್ಯಕ್ಷಿಕೆ ಅಳವಡಿಸಿಕೊಂಡ ರೈತ ಬಸವರಾಜ್ ಮಾತನಾಡಿ, ಕಾಲಕಾಲಕ್ಕೆ ತಜ್ಞರ ಸಲಹೆ ಅಳವಡಿಸಿಕೊಂಡಿರುವುದರಿಂದ ರೋಗ ಮತ್ತು ಕೀಟದ ಹಾವಳಿ ಕಡಿಮೆಯಾಗಿ ಉತ್ತಮ ಇಳುವರಿ ಬಂದಿರುವುದಾಗಿ ಸಂತಸ ವ್ಯಕ್ತಪಡಿಸಿದರು.

ರೈತರಿಗೆ ಅಗತ್ಯ ಪರಿಕರಗಳನ್ನು ಈ ಸಂದರ್ಭದಲ್ಲಿ ಒದಗಿಸಲಾಯಿತು.

ಕೇಂದ್ರದ ಬೇಸಾಯ ತಜ್ಞ ಬಿ.ಓ.ಮಲ್ಲಿಕಾರ್ಜುನ್, ಕೊಂಡುಕುರಿ ರೈತ ಉತ್ಪಾದಕ ಕಂಪನಿಯ ಕಾರ್ಯ ನಿರ್ವಹಣಾಧಿಕಾರಿ ರುದ್ರೇಶ್ ಮತ್ತು ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಲಯನ್ಸ್‌ನಿಂದ ಸ್ವಾಗತ ನಾಮಫಲಕ ಅನಾವರಣ



ದಾವಣಗೆರೆ,ನ.15- ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ನಗರದ ಪಿ.ಬಿ. ರಸ್ತೆಯ ಜಿಲ್ಲಾಧಿಕಾರಿಗಳ ಕಚೇರಿ ಬಳಿ ನಿರ್ಮಿಸಿರುವ ಸ್ವಾಗತ ನಾಮಫಲಕವನ್ನು ಜಿಲ್ಲಾ ಲಯನ್ಸ್ 317ಸಿ ರಾಜ್ಯಪಾಲ ಕೆ.ಸಿ.ವೀರಭದ್ರ ಅವರು ಅನಾವರಣಗೊಳಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಎಂ. ವಿಜಯ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಲಯನ್ಸ್ 317ಸಿ ಉಪ ರಾಜ್ಯಪಾಲ ವಿಶ್ವನಾಥ ಶೆಟ್ಟಿ, ಜಿಲ್ಲಾ ಲಯನ್ಸ್ ಮಾಜಿ ರಾಜ್ಯ ಪಾಲ ಡಾ. ಬಿ.ಎಸ್. ನಾಗಪ್ರಕಾಶ್, ಜಿಲ್ಲಾ ಲಯನ್ಸ್ 317ಸಿ ಛೇರ್ಮನ್ ಇ.ಎಂ. ಮಂಜುನಾಥ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ನಾಮಫಲಕದ ದಾನಿ, ಹಳ್ಳಿಕೇರಿ ಇಂಡಸ್ಟ್ರೀಸ್ ಮಾಲೀಕರೂ ಆಗಿರುವ ಲಯನ್ಸ್ ಕ್ಲಬ್ ಖಜಾಂಚಿ ಸಂಪತ್ ಬಿ.ಹಳ್ಳಿಕೇರಿ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಜಿಲ್ಲಾ ಲಯನ್ಸ್ ಕೋ-ಆರ್ಡಿನೇಟರ್ ಗಳಾದ ದಿನೇಶ್ ಕೆ.ಶೆಟ್ಟಿ, ಲಯನ್ಸ್ ಟ್ರಸ್ಟ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಲಯನ್ಸ್ ಕಾರ್ಯದರ್ಶಿ ಕೋರಿ ಶಿವಕುಮಾರ್, ನಿರ್ದೇಶಕರುಗಳಾದ ಎನ್.ಸಿ. ಬಸವರಾಜ್, ಪರಮೇಶ್ವರಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಭಿರುಚಿಯ ಜೊತೆ ಸಾಗಿದಾಗ ಅಪ್ರತಿಮ ಸಾಧನೆ ಸಾಧ್ಯ

ಚಿತ್ರದುರ್ಗ, ನ.15- ರುಚಿಯ ಜೊತೆ ಹೋದವರು ಸಾಧನೆ ಮಾಡಲಾರರು. ಆದರೆ ಅಭಿರುಚಿಯ ಜೊತೆ ಸಾಗಿ ದಾಗ ಅಪ್ರತಿಮ ಸಾಧನೆ ಮಾಡಲು ಸಾಧ್ಯ ಎನ್ನುವುದಕ್ಕೆ ಅವಿರಳ ಜ್ಞಾನಿ ಚೆನ್ನಬಸವಣ್ಣ ಉದಾಹರಣೆಯಾಗಿದ್ದಾರೆ ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀ ಮುರುಘರಾಜೇಂದ್ರ ಮಠದಲ್ಲಿ ನಡೆದ ಚೆನ್ನಬಸವಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಶರಣರು ಆಶೀರ್ವಚನ ನೀಡಿದರು.

ಅನ್ನಮಯ, ಜ್ಞಾನಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳನ್ನು ಹೇಳಿದವರು ಚೆನ್ನಬಸವಣ್ಣನವರು. ಕೋಶ ಎಂದರೆ ಕವಚ, ಭಂಡಾರ, ಶಬ್ಧಕೋಶ, ಅರ್ಥಕೋಶ ಎನ್ನುತ್ತಾರೆ. ಚೆನ್ನಬಸವಣ್ಣ ಜ್ಞಾನಕೋಶ ಬೆಳಕನ್ನು ಮೀರಿದ್ದು ಪ್ರಕಾಶ. ಚಿನ್ಮಯಜ್ಞಾನಿ, ದಿವ್ಯಜ್ಞಾನಿ ಚೆನ್ನಬಸವಣ್ಣನವರದು. ಜ್ಞಾನ ಪ್ರಕಾಶ ಅವರ ಬದುಕಿನ ಮಹೋನ್ನತಿ ಎಂದರೆ ಸುಜ್ಞಾನ ಪ್ರಕಾಶ ಚೆಲ್ಲಿದುದು. ಇವರು ಅವಿರಳರಲ್ಲಿ ಅವಿರಳರು. ಷಟ್‌ಸ್ಥಲಗಳಿಗೆ ವ್ಯಾಖ್ಯಾನ ಬರೆದವರು. ಅಮರಗಣಂಗಳಲ್ಲಿ ಕಿರಿಯರಲ್ಲಿ ಕಿರಿಯರಾದರೂ ಜ್ಞಾನದಲ್ಲಿ ಹಿರಿಯರಾಗಿದ್ದರು. ಅರಿವಿಂಗೆ ಹಿರಿದು ಕಿರಿದುಂಟೆ ಎಂದು ಹೇಳುತ್ತಾರೆ. ಅಲ್ಲಮಪ್ರಭುದೇವರು ಶರೀರಕ್ಕೆ ವಯಸ್ಸಿದೆ, ಆದರೆ ಜ್ಞಾನಕ್ಕೆ ವಯಸ್ಸಿಲ್ಲ ಎಂದಿದ್ದಾರೆ. ಚಿಕ್ಕವಯಸ್ಸಿನ ಚೆನ್ನಬಸವಣ್ಣನವರು ದಿವ್ಯಜ್ಞಾನಿ ಎನಿಸಿಕೊಂಡರು.



ರುಚಿಯ ಜೊತೆಯಲ್ಲಿ ಸಾಗದೆ ಅಭಿರುಚಿಯ ಜೊತೆ ಸಾಗಬೇಕು. ಅಭಿರುಚಿ ಅಧ್ಯಯನಕ್ಕೆ ಸಂಬಂಧಿಸಿದುದು. ನಿರಂತರವಾಗಿ ಆಹಾರದ ಚಿಂತನೆ ಮಾಡಬಾರದು. ಜ್ಞಾನದ ಚಿಂತನೆ ಮಾಡಬೇಕು. ಚೆನ್ನಬಸವಣ್ಣ ಮಿತಭಾಷಿ ಮತ್ತು ಮಿತ ಆಹಾರಿಯಾಗಿದ್ದರು. ಅಂಗ ಪ್ರಸಾದವನ್ನು ಲಿಂಗ ಪ್ರಸಾದನ್ನಾಗಿಸಬೇಕು ಎಂದರು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕೆಇಬಿ ಷಣ್ಮುಖಪ್ಪ, ಬಸವರಾಜ ಕಟ್ಟಿ ವೇದಿಕೆಯಲ್ಲಿದ್ದರು.

> ಸೂರ್ಯ-ಚಂದ್ರರು ಭೂಮಿಯನ್ನು ಬೆಳಗುತ್ತಾರೆ. ಲೋಕಾದಿಲೋಕಗಳಿಗೆಲ್ಲ ಪ್ರಕಾಶ ಪಸರಿಸುತ್ತದೆ. ಪ್ರಕಾಶದ ವ್ಯಾಪ್ತಿ ವಿಶಾಲವಾದುದು. ಶರಣ ಪರಂಪರೆಯಲ್ಲಿ ಪ್ರಕಾಶಕಾಯರು ಆಗಿಹೋಗಿದ್ದಾರೆ. ಮುಖ್ಯವಾಗಿ ಬಸವಣ್ಣ ಅಂದರೆ ಕಲ್ಯಾಣ. ಪ್ರಗತಿ ಕಾರ್ಯಗಳು ಎಲ್ಲಿರುತ್ತವೆಯೋ ಅಲ್ಲಿ ಬಸವಣ್ಣನವರ ಕಲ್ಯಾಣ ಇರುತ್ತದೆ. ಅಲ್ಲಮ, ಅಕ್ಕ ಮೊದಲಾದ ಶರಣ ಶರಣೆಯರದು ಅನುಭಾವದ ಪ್ರಕಾಶ. ಬಸವಣ್ಣನವರು ಅನುಭಾವವನ್ನು ಚೆಲ್ಲಿದರು. ಪ್ರಪಂಚ ಸಿರಿಸಂಪತ್ತುಗಳ ಜೊತೆ ಸಾಗಿದರೆ ಅಲ್ಲಮ ಅನುಭಾವದ ಜೊತೆ ಸಾಗಿದರು.
>
> -ಮುರುಘಾ ಶರಣರು

ಪ್ರೊ. ಬಿ.ಎಂ. ಜಗದೀಶ್ ಮತ್ತಿತರರು ಭಾಗವಹಿಸಿದ್ದರು.

ಉಮೇಶ್ ಪತ್ತಾರ್ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಎ.ಜೆ. ಪರಮಶಿವಯ್ಯ ಸ್ವಾಗತಿಸಿದರು. ಡಾ. ಸಿ.ಟಿ. ಜಯಣ್ಣ ನಿರೂಪಿಸಿದರು.

## ದೀಪಾವಳಿ ಆಚರಣೆ

ಅಜ್ಞಾನ ಓಡಿಸುವ ಹಬ್ಬ ಅಂಧಕಾರ ತೊಲಗಿಸುವ ಹಬ್ಬ  
ದೀಪದಿಂದ ದೀಪ ಹಚ್ಚು ಮಾನವ  
ದೀವಿಗೆಯಿಂದ ಪ್ರೀತಿ ಯ ಹಂಚು ಮನವೇ

ತ್ರಯೋದಶಿ ದಿನ ನೀರು ತುಂಬುವ ಪಾತ್ರೆಗಳೆಲ್ಲ  
ಬೆಳಗಿ ಶುದ್ಧ ನೀರು ತುಂಬಿಸುವ ಜಲರೂಪಿ ಪರಮಾತ್ಮನಿಗೆ  
ಆರತಿ ಬೆಳಗಿ ದೀಪ ಬೆಳಗಿ ಹಬ್ಬದ ತಯಾರಿ ಮಾಡಿ

ಮಾರನೇ ದಿನ ನರಕಚತುರ್ದಶಿ  
ನರಕಾಸುರನ ವಧಿಸಿದ ದಿನ ಝೂವಕ್ಕೆ ಆರತಿ ಅಭ್ಯಂಜನ  
ಸಾಲು ಸಾಲು ದೀಪ ಬೆಳಗಿ ಜ್ಯೋತಿ ಸ್ವರೂಪಿ ಪರಮಾತ್ಮನ ನೆನೆ

ಅಮಾವಾಸ್ಯೆ ಲಕ್ಷ್ಮೀಪೂಜೆ ಐದು ಹಿಡಿ ಅಕ್ಕಿಯ ಮೇಲೆ ಕಳಶವಿಟ್ಟು  
ಸೀರೆ ಉಡಿಸಿ ಅರಿಶಿನಕೊಂಬು ಕಟ್ಟಿ  
ಆಭರಣ ಹಾಕಿ ದೇವಿ ಪ್ರತಿಷ್ಠಾಪಿಸಿ

ಕಲಶಕ್ಕೆ ಅರಿಶಿಣಕುಂಕುಮ ನಾಣ್ಯ ಹಾಕಿ, ಐದು ವೀಳ್ಯದೆಲೆ ಇಟ್ಟು  
ಶುದ್ಧ ನೀರು ಹಾಕಿ, ಮೊದಲು ವಿಘ್ನೇಶ್ವರನ ಪೂಜಿಸಿ  
ದೇವಿಗೆ ಅರಿಶಿಣ ಕುಂಕುಮ ಏರಿಸಿ, ಗೆಜ್ಜೆವಸ್ತ್ರ ಧೂಪದೀಪದಿಂದ ಪೂಜಿಸಿ

ಗೋಧೂಳಿ ಸಮಯದಿ ಹೂವಿನಿಂದ ಅರ್ಚಿಸಿ, ಮನೆಯ  
ಮೂಲೆಮೂಲೆಯಲ್ಲಿ ಜ್ಯೋತಿ ಬೆಳಗಿ, ಭೂಲೋಕಕ್ಕೆ  
ಬರುವ ಲಕ್ಷ್ಮಿಯನ್ನು ಧನದಲ್ಲಿ ಅನುಸಂಧಾನ ಮಾಡಿ ಪೂಜಿಸಿ

ಪಾಡ್ಯ ಬಲಿಂದ್ರನ ಪೂಜೆ ಗೋಮಯದಿಂದ  
ಬಲೀಂದ್ರನ ಮಾಡಿ ವಾಮಾನವತಾರಿ ವಿಷ್ಣುವನ್ನು ಪೂಜಿಸಿ

ಉತ್ತರ ಭಾರತದಲ್ಲಿ ರಾವಣನ ಸಂಹಾರ  
ರಾಮ ಅಯೋಧ್ಯೆಗೆ ಮರಳಿದ ಸಂಭ್ರಮ  
ದುಷ್ಟರ ಸಂಹಾರ ಶಿಷ್ಟರ ವಿಜಯದ ಹಾರ  
ವೈಭವದ ದೀಪಾವಳಿ ಗೋವಿಂದನ ಲೀಲಾವಳಿ

**- ಕೋಮಲ ವಸಂತ ಕುಮಾರ್,** ದಾವಣಗೆರೆ.

# ಅಡಿಕೆ, ಜಾನುವಾರು ಕಳ್ಳರ ಬಂಧನ

## 6.44 ಲಕ್ಷ ರೂ. ಮೌಲ್ಯದ ಮಾಲು ವಶ



ದಾವಣಗೆರೆ, ನ.15- ರೈತರು ಬೆಳೆದ ಅಡಿಕೆ, ಸಾಕಿದ ಹಸು-ಕರುಗಳನ್ನು ಕಳವು ಮಾಡುತ್ತಿದ್ದ ದಾವಣಗೆರೆ-ಹಾವೇರಿ ಜಿಲ್ಲೆಗಳ 6 ಮಂದಿ ಆರೋಪಿಗಳನ್ನು ಬಂಧಿಸಿ, 6.44 ಲಕ್ಷ ರೂ. ಮೌಲ್ಯದ ಅಡಿಕೆ, ಹಣ ಹಾಗೂ ಬೊಲೆರೋ ವಾಹನವನ್ನು ಮಲೇಬೆನ್ನೂರು ಪೊಲೀಸರು ಇಂದು ವಶಪಡಿಸಿಕೊಂಡಿದ್ದಾರೆ.

ಹಿರೇಕೆರೂರು ತಾಲ್ಲೂಕಿನ ಮಾಸೂರು ಗ್ರಾಮದವರೆನ್ನಲಾದ ರಾಜಾಸಾಬ್, ರಟ್ಟಿಹಳ್ಳಿ ವಾಸಿ ರಾಜ ಮೊಹಮ್ಮದ್, ಈರಾಪುರದ ಅಬ್ದುಲ್, ಹರಿಹರ ತಾಲ್ಲೂಕಿನ ಗುತ್ತೂರು ಕಾಲೋನಿಯವರೆನ್ನಲಾದ ಸಲೀಂ, ಗಂಗನರಸಿ ಗ್ರಾಮದ ವಾಸಿಗಳೆನ್ನಲಾದ ರಫೀಕ್, ಶೌಕತ್ ಅಲಿ ಬಂಧಿತ ಆರೋಪಿಗಳು.

ಮಲೇಬೆನ್ನೂರು ಠಾಣೆ ವ್ಯಾಪ್ತಿಯ ನಂದಿತಾವರೆ ಗ್ರಾಮದಲ್ಲಿ ಕಳವು ಮಾಡಿದ್ದ 95 ಕ್ವಿಂಟಾಲ್ ಅಡಿಕೆ, ದಾವಣಗೆರೆ ಗ್ರಾಮಾಂತರ ಠಾಣೆ ವ್ಯಾಪ್ತಿಯ ಹೊನ್ನೂರು ಗ್ರಾಮದಲ್ಲಿ ಕಳವು ಮಾಡಿದ್ದ 4.5 ಕ್ವಿಂಟಾಲ್ ಅಡಿಕೆ, ಹರಿಹರ ನಗರದಲ್ಲಿ ಹಸು-ಕರುವನ್ನು ಕಳ್ಳತನ ಮಾಡಿ, ಮಾರಾಟ ಮಾಡಿ ಉಳಿದಿದ್ದ 24 ಸಾವಿರ ರೂ.ಗಳನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ. ಮಲೇಬೆನ್ನೂರು, ದಾವಣಗೆರೆ ಗ್ರಾಮಾಂತರ ಠಾಣೆ, ಹರಿಹರ ನಗರ ಠಾಣೆ ವ್ಯಾಪ್ತಿಯ ಅಡಿಕೆ ಕಳುವು, ಹಸು-ಕರು ಕಳವಿನ ಒಟ್ಟು 3 ಪ್ರಕರಣಗಳನ್ನು ಪೊಲೀಸರು ಬೇಧಿಸಿದ್ದಾರೆ.

ನಂದಿತಾವರೆ ಗ್ರಾಮದ ರೈತ ಬಿ.ಪಿ. ಬಸವಲಿಂಗಪ್ಪ ಗೌಡ ಎಂಬಾತ ತನ್ನ ತೋಟದಲ್ಲಿ ಬೆಳೆದಿದ್ದ ಅಡಿಕೆ ಕಳ್ಳತನವಾದ ಬಗ್ಗೆ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಮಾರ್ಗದರ್ಶನದಲ್ಲಿ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ, ಸಿಪಿಐ ಶಿವಪ್ರಸಾದ ನೇತೃತ್ವದಲ್ಲಿ ಎಸ್‌ಐ ವೀರಬಸಪ್ಪ ಕುಸಲಾಪುರ, ಎಎಸ್‌ಐ ಯಾಸಿನ್‌ವುಲ್ಲಾ, ಸಿಬ್ಬಂದಿಗಳಾದ ಕೆ. ಶಿವಕುಮಾರ, ಆರ್.ಲಕ್ಷ್ಮಣ, ರಾಜಶೇಖರ, ಟಿ. ಬಸವರಾಜ, ಮೂರ್ತಿ, ಸಂತೋಷಕುಮಾರ, ದ್ವಾರಕೀಶ, ನಾಗಪ್ಪ ಕಡೇಮನಿ, ರವಿ, ವೆಂಕಟೇಶರನ್ನು ಒಳಗೊಂಡ ವಿಶೇಷ ತಂಡವು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.



ದೀಪಾವಳಿ ಹಬ್ಬದ ಸಂದರ್ಭದಲ್ಲಿ ; 'ಲಕ್ಷ್ಮಿ ಬಾರಮ್ಮ ನಮ್ಮಮ್ಮ ನೀ ಸೌಭಾಗ್ಯದಾ ಲಕ್ಷ್ಮಿ ಬಾರಮ್ಮ' ಎಂದು ನಾಗರಿಕರು ವಿಜೃಂಭಣೆಯಿಂದ ಲಕ್ಷ್ಮೀ ದೇವಿಯ ಪೂಜೆಯನ್ನು ನೆರವೇರಿಸಿ ಪ್ರಾರ್ಥಿಸಿದರು.

# ನಗರದಲ್ಲಿ ಇಂದು ಸಹಕಾರ ಸಪ್ತಾಹ

'ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ, ತರಬೇತಿಯ ಪುನರ್ ಮನನ' ಧ್ಯೇಯದಡಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ನಡೆಯಲಿದೆ.

## ಹಳ್ಳಿ ಹೈದ

ಹಳ್ಳಿಯ ಹೈದನಾದರೂ, ಬರಿಗೈಲಿ ನಗರಕ್ಕೆ ಬಂದ  
ವ್ಯಾಪಾರ ರಂಗಕ್ಕೆ ಇಳಿದ, ರೈತರಿಗೆ ಮೋಸ ಮಾಡಿದ  
ಸಾಹುಕಾರನಾದ? ಜನಿಸಿದ ಮಕ್ಕಳು ದಿಕ್ಕಾಪಾಲಾದರು?

ಕೆ.ಎಂ. ಚಂದ್ರಶೇಖರಯ್ಯ ನಿವೃತ್ತ ಶಿಕ್ಷಕರು

## ಮಕ್ಕಳನು ಅಣಿಮಾಡುವ

ಮಕ್ಕಳೆ ನಮ್ಮಯ ಮುಂದಿನ  
ಪ್ರಜೆಗಳು  
ಮಕ್ಕಳ ದಿನ ಆಚರಿಸೋಣ  
ಮಕ್ಕಳ ಒಳಗಿಹ ಶಕ್ತಿಯ  
ಪೋಷಿಸಿ  
ಅಕ್ಕರೆಯಿಂದಲಿ ಬೆಳೆಸೋಣ

ಕೆಟ್ಟ ಗುಣಗಳ ತಕ್ಷಣ ಖಂಡಿಸಿ  
ಪುಟ್ಟ ಕೈಗಳಿಂದ ದಾನವ ಕೊಡಿಸಿ  
ದಿಟ್ಟ ಹೆಜ್ಜೆಯಿಡೋ ಧೈರ್ಯ  
ತುಂಬಿಸಿ  
ಸುಟ್ಟು ಹೇಡಿತನ ಮುನ್ನುಗ್ಗಿಸಿ

ಶ್ರೇಷ್ಠ ಕಲೆಗಳ ಅವರಿಗೆ ಕಲಿಸಿ  
ನಿಷ್ಠೆ ಶ್ರದ್ಧೆಗೆ ಮನ್ನಣೆ ಹೆಚ್ಚಿಸಿ  
ಕಷ್ಟಕೆ ಹೆದರದ ಕೆಚ್ಚೆದೆ ಮೂಡಿಸಿ  
ಬಲಿಷ್ಠ ಯುವಜನರನ್ನಾಗಿಸಿ

ಮುದ್ದಿಸಿ ಶಿಕ್ಷಿಸಿ ದಾರಿಯ  
ತೋರುತ  
ಬಿದ್ದರೆ ಏಳುವ ಛಾತಿಯ  
ಬೆಳೆಸುತ  
ಹೃದಯವ ಕಬ್ಬಿಣದಂತೆ  
ಮಾಡುತ  
ಶುದ್ಧ ಜೀವನಕೆ ಅಣಿಮಾಡುತ

**- ಶ್ರೀ ಕೃಷ್ಣಾರ್ಪಣಮಸ್ತು  
ರೂಪಶ್ರೀ ಶಶಿಕಾಂತ್**

## ದಿನದ ಚುಟುಕು

ನಿರಾಕಾರ ನೀರಿಗೆ  
ನಿಸರ್ಗವೇ ರಂಗಿನೋಕುಳಿ  
ನಿರಾಭರಣ ನೀರೆಗೆ  
ಮುಗುಳ್ನಗೆಯೇ ಸುಳಿಗುಳಿ!!

**- ಶ್ರೀಮತಿ ವೀಕೆಎಂ**




ಸರ್ವರಿಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು

ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ ಯುವ ಕಾಂಗ್ರೆಸ್ ಮುಖಂಡರಾದ **ಶ್ರೀ ಮಾರುತಿ ಶಾಮನೂರು** ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

43ನೇ ವಾರ್ಡಿನ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ಸ್ನೇಹಿತರು, ಶಾಮನೂರು.



**ದೀಪಾವಳಿ ಹಬ್ಬದ ಶುಭಾಶಯಗಳು**

ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

**ಪವಾಡಪ್ಪ ತಿಪ್ಪೇಸ್ವಾಮಿ** ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765

**ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು**


ಸಮಸ್ತ ನಾಗರಿಕರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.


ರಾಜಶೇಖರ್ ಬಿ. ಮಾಕನೂರು
ಶಿವ ರಿಯಲ್ ಎಸ್ಟೇಟ್ ಲಿಂಕ್ಸ್
ಸೈಟು, ಮನೆ ಖರೀದಿಗೆ ಮಾರಾಟಕ್ಕೆ ಸಂಪರ್ಕಿಸಿ.
ಡೋರ್ ನಂ.3038/14, 14ನೇ ಕ್ರಾಸ್
ಆಂಜನೇಯ ಬಡಾವಣೆ, ದಾವಣಗೆರೆ.
ಮೊ: 98863-70445


ಬಸವರಾಜ್ ಆರ್. ಮಾಕನೂರು
ಸಹಾಯಕ ಇಂಜಿನಿಯರ್, ಮೆಸ್ಕಾಂ,
ಮೊ. 88672 92191

ಎಲ್‌ಇಡಿ ಬಳಸಿ, ವಿದ್ಯುತ್ ಉಳಿಸಿ

**ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು**




ಸಮಸ್ತ ನಾಗರಿಕರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

**ಬಿ.ವಿ. ಶಿವಾನಂದ,** ಜಿಲ್ಲಾ ಪತ್ರ ಬರಹಗಾರರು
✦ ಅಧ್ಯಕ್ಷರು, ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ
✦ ಮಾಲೀಕರು, **ಶಿವಾನಂದ ಅಸೋಸಿಯೇಟ್ಸ್**
ಹಳೇ ತಾಲ್ಲೂಕು ಕಚೇರಿ ಎದುರು, ದಾವಣಗೆರೆ.

ಮಲೇಬೆನ್ನೂರು ಜನತೆಗೆ
**ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು**

ಹರಿಹರ ತಾಲ್ಲೂಕು ಮಲೇಬೆನ್ನೂರು ಪಟ್ಟಣದ ಪುರಸಭೆಗೆ ಜಾತ್ಯತೀತ ಜನತಾದಳ ಮತ್ತು ಭಾರತೀಯ ಜನತಾ ಪಕ್ಷದ ಮೈತ್ರಿ ಅಭ್ಯರ್ಥಿಗಳಾಗಿ ಸ್ಪರ್ಧೆ ಮಾಡಿದ್ದ ನಮ್ಮನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಶ್ರಮಿಸಿದ ಉಭಯ ಪಕ್ಷಗಳ ಸದಸ್ಯರು ಹಾಗೂ ಪಕ್ಷೇತರ ಸದಸ್ಯರು, ಮುಖಂಡರು, ಕಾರ್ಯಕರ್ತರು ಸೇರಿದಂತೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲ ಅಭಿಮಾನಿಗಳಿಗೆ ನಮ್ಮ ಹೃದಯ ಸ್ಪರ್ಶಿ ಕೃತಜ್ಞತೆಗಳು.


ಶ್ರೀಮತಿ ನಾಹಿದಾ ಅಂಜುಂ ಕೋಂ ಶ್ರೀ ಸೈಯದ್ ಇಸ್ರಾರ್ ಅಹ್ಮದ್, ಅಧ್ಯಕ್ಷರು, ಪುರಸಭೆ, ಮಲೇಬೆನ್ನೂರು.


ಶ್ರೀಮತಿ ಅಂಜಿನಮ್ಮ.ಕೋಂ ಆದಾಪುರ ಶ್ರೀ ವಿಜಯಕುಮಾರ್ ಉಪಾಧ್ಯಕ್ಷರು, ಪುರಸಭೆ, ಮಲೇಬೆನ್ನೂರು.













JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte